# ಜನಶ್ರೀ ಟೈಮ್ಸ್

ಕನ್ನಡ ದಿನಪತ್ರಿಕೆ

JANASHREE TIMES KANNADA DAILY NEWS PAPER

PRGI NO : KNKAN/26/A0482

ಜನಶ್ರೀವಾಣಿ

ಮಂದಿ ಮಾತು ಕೇಳಿ ಹಾಳಾಗುವುದಕ್ಕಿಂತ, ತಂದಿ ಮಾತು ತಿಳಿದು ಬಾಳುವುದೇ ಸ್ವರ್ಗ.

■ ಆನಂದಯ್ಯ ವಿರಕ್ತಮಠ
ಸಂಪಾದಕರು: ಜನಶ್ರೀ ಟೈಮ್ಸ್

ಸಂಪಾದಕರು: ಆನಂದಯ್ಯ ವಿರಕ್ತಮಠ | ಸಂಪುಟ: 01 ಸಂಚಿಕೆ: 02 ಪುಟಗಳು: 04 ಬೆಲೆ: 02 ರೂ. ದಿನಾಂಕ: 17-06-2026 ಬುಧವಾರ | 73536 56555


## ಎಚ್.ಕೆ. ಪಾಟೀಲ್ ಅವರಿಗೆ ಸಚಿವ ಸ್ಥಾನ ನೀಡಲೆಂದು ಸಾಮೂಹಿಕ ದುವಾ

ಗದಗ: ನಗರದ ಗಂಗಿಮಡಿ ಅಬುಹೊರೆರ ಮಸೀದಿಯಲ್ಲಿ ಹಿರಿಯ ರಾಜಕೀಯ ಮುಖಂಡ ಎಚ್.ಕೆ. ಪಾಟೀಲ್ ಅವರಿಗೆ ಸಚಿವ ಸ್ಥಾನ ದೊರೆಯಲೆಂದು ವಿಶೇಷ ಸಾಮೂಹಿಕ ದುವಾ ಕಾರ್ಯಕ್ರಮವನ್ನು ಆಯೋಜಿಸಲಾಯಿತು.



ಈ ಸಂದರ್ಭದಲ್ಲಿ ಧರ್ಮಗುರುಗಳಾದ ಜನಾಬ್ ಇನಾಯತುಲ್ಲಾ ಸಾಹೇಬ್ ಪೀರ್ಜೇಜ್, ಮೌಲಾನಾ ಅಬ್ದುಲ್ ಗಫೂರ್ ಸಾಹೇಬ್ ಪಲ್ಲೇದ್, ಮೌಲಾನಾ ಅಬ್ದುಲ್ ಸಮದ್ ಜಕಾತಿ, ಹಫೀಜ್ ಅಬೂಬಕರ್, ಹಫೀಜ್ ಸದಾಂ, ಹಫೀಜ್ ಅಬ್ದುಲ್ಲಾ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿ, ಎಚ್.ಕೆ. ಪಾಟೀಲ್ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ದೊರೆಯುವಂತೆ ಪ್ರಾರ್ಥನೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಸೈಯದ್ ಖಾಲಿದ್ ಕೊಪ್ಪಳ, ಉಸ್ಮಾನ್ ಮಳಕೊಪ್ಪ, ಫಾರೂಕ್ ಸಿಂದಗಿ, ಅಕ್ತರ್ ಅತ್ತರ, ಮೊಹಮ್ಮದ್ ಬೆಟಗೇರಿ, ಉಜ್ಜೈರ್, ಮೈನು ಗುಜಮಾಗಡಿ, ಚಾಂದ್ ಸಾಬ್ ಅಬ್ಬಿಗೇರಿ, ಮಹಮ್ಮದ್ ಬೋಟ್ಲಿ ಖಾನ್, ಆಫೀಸ್ ರೋಣ, ಬಾಬಾಜಾನ್ ಹಣಗಿ, ಬಾಬಾಜಾನ್ ಕೊಡತಗೇರಿ ಸೇರಿದಂತೆ ಹಲವಾರು ಮುಖಂಡರು ಹಾಗೂ ಭಕ್ತಾದಿಗಳು ಉಪಸ್ಥಿತ-ರಿದ್ದರು. ಎಚ್.ಕೆ. ಪಾಟೀಲ್ ಅವರ ಅನುಭವ, ಜನಪರ ಸೇವೆ ಹಾಗೂ ಆಡಳಿತಾತ್ಮಕ ಸಾಮರ್ಥ್ಯವನ್ನು ಪರಿಗಣಿಸಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ರಾಜ್ಯದ ಅಭಿವೃದ್ಧಿ, ಶಾಂತಿ ಮತ್ತು ಸೌಹಾರ್ದತೆಗಾಗಿ ವಿಶೇಷ ದುವಾ ಮಾಡಲಾಯಿತು.

## ಅರ್ಜಿ ಆಹ್ವಾನ

ಗದಗ: ಪೌರಾಡಳಿತ ನಿರ್ದೇಶನಾಲಯ ಬೆಂಗಳೂರುರವರ ನಿರ್ದೇಶನದಂತೆ ರೋಣ ಪುರಸಭೆಯಲ್ಲಿ Intern Health Inspector –01 ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ. ಒಂದು ವರ್ಷ ಕೌಶಲ್ಯ ಮತ್ತು ಸಾಮರ್ಥ್ಯ ವೃದ್ಧಿಪಡಿಸುವ ಉದ್ದೇಶದಿಂದ ಮಾತ್ರ ಅರ್ಜಿ ಕರೆಯಲಾಗಿದೆ. ಖಾಯಂ ಯಾತಿಗೆ ಅವಕಾಶವಿರುವುದಿಲ್ಲ.

ಆಸಕ್ತಿಯುಳ್ಳವರು ಜೂನ್ 24 ಒಳಗಾಗಿ ಖಿಗ-LIP INTERNSHIP PROGRAMM ಇನುß http://intership.aicte.india.org ತಂತ್ರಾಶದಲ್ಲಿ ನೋಂದಾಯಿಸಿಕೊಳ್ಳಬೇಕು. ತಾತ್ಕಲಿಕವಾಗಿ ಪರೀಕ್ಷಾರ್ಥ ತರಬೇತಿ ಅಭ್ಯರ್ಥಿಗಳ ಆಯ್ಕೆಗಾಗಿ ಕರ್ತವ್ಯ ನಿರ್ವಹಿಸಿದವ-ರಿಗೆ ಕಚೇರಿಯಿಂದ ಪ್ರಮಾಣ ಪತ್ರ ನೀಡಲಾಗುವುದು ಹಾಗೂ ಇದು ಒಂದು ತಾತ್ಕಾಲಿಕ ತರಬೇತಿ( Intern ) ಮಾತ್ರ ಇರುತ್ತದೆ. ಸ್ಥಳೀಯರಿಗೆ ಮೊದಲ ಆಧ್ಯತೆ ನೀಡಲಾಗುವುದು ಎಂದು ರೋಣ ಪುರಸಭೆ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


**ಜನಶ್ರೀ ಟೈಮ್ಸ್**

**ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.**


# ಹೆಚ್.ಕೆ ಪಾಟೀಲರಿಗೆ ಸಚಿವ ಸ್ಥಾನದ ಜೊತೆಗೆ ಉಪಮುಖ್ಯಮಂತ್ರಿ ಸ್ಥಾನ ನೀಡಲು ಹಕ್ಕೊತ್ತಾಯ ಚಕ್ಕಡಿ, ಟ್ರ್ಯಾಕ್ಟರ್, ಆಟೋ, ಕಾರಿನಲ್ಲಿ ಬಂದ ಸಹಸ್ರಾರು ಅಭಿಮಾನಿಗಳಿಂದ ಪ್ರತಿಭಟನೆ

ಗದಗ: ಹಿರಿಯ ಕಾಂಗ್ರೆಸ್ ನಾಯಕ, ಮಾಜಿ ಸಚಿವ ಹಾಗೂ ಗದಗ ಮತಕ್ಷೇತ್ರದ ಶಾಸಕ ಎಚ್.ಕೆ. ಪಾಟೀಲ ಅವರಿಗೆ ಮುಂಬರುವ ಸಚಿವ ಸಂಪುಟ ವಿಸ್ತರಣೆಯಲ್ಲಿ ಸೂಕ್ತ ಸಚಿವ ಸ್ಥಾನ ನೀಡಬೇಕೆಂದು ಒತ್ತಾಯಿಸಿ ಗದಗನಲ್ಲಿ ಸಹಸ್ರಾರು ಕಾರ್ಯಕರ್ತರು ಬೃಹತ್ ಪಾದಯಾತ್ರೆ ಕೈಗೊಂಡು ಪ್ರತಿಭಟಿಸಿ ಬಳಿಕ ಸಮಾವೇಶ ನಡೆಸಿ ಕಾಂಗ್ರೆಸ್ ಹೈಕಮಾಂಡ್ ಮತ್ತು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದರು.

ನಗರದ ಕಾಟನ್ ಸೇಲ್ ಸೊಸೈಟಿಯಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ಆರಂಭಿಸಿದ ಹೆಚ್ ಕೆ ಪಾಟೀಲಅಭಿಮಾನಿಗಳು ಭೂಮರಡ್ಡಿ ವೃತ್ತ ,ಮಹಾತ್ಮ ಗಾಂಧಿ ವೃತ್ತ ಮಹೇಂದ್ರಕರ್ ವೃತ್ತ, ಟಾಂಗಾ ಕೂಟ, ಬಸವೇಶ್ವರ ಸರ್ಕಲ್, ಪಂಚರ ಹೊಂಡ ಹಾಗೂ ಜೋಡ ಮಾರುತಿ ದೇವಸ್ಥಾನದ ರಸ್ತೆಯಲ್ಲಿ ಸಾಗಿ ಮುಳಗುಂದ ನಾಕಾದಲ್ಲಿ ಜಮಾಯಿಸಿದರು. ಮುಳಗುಂದ ನಾಕಾದಲ್ಲಿ ಹಾವೇರಿ ಬಾಗಲಕೋಟೆ ಸೇರಿದಂತೆ ಗದಗ ಭಾಗದ ಮುಖಂಡರುಗಳು ಸಾವಿರಾರು ಕಾರ್ಯಕರ್ತರ ಎದುರು ಹೆಚ್.ಕೆ ಪಾಟೀಲ-ರಿಗೆ ಸಚಿವ ಸ್ಥಾನ ನೀಡಲು ಒತ್ತಾಯಿಸುವ ಉದ್ದೇಶವನ್ನು ವ್ಯಕ್ತಪಡಿಸಿ, ಹೈಕಮಾಂಡ್'ಗೆ ಆಗ್ರಹ ಮಾಡಿದರು.









ಸುಡುಬಿಸಿಲಿನ ನಡುವೆಯೂ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ಕಾರ್ಯಕರ್ತರಿಗಾಗಿ ಗದಗ ನಗರದ ಮುಖಂಡರು ಮಜ್ಜಿಗೆ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದರು. ಪ್ರತಿಭಟನಾ ಮೆರವಣಿಗೆಯು ಮುಳಗುಂದ ನಾಕಾಕೆ ತಲುಪುತ್ತಿದ್ದಂತೆ ವೃತ್ತದಲ್ಲಿ ಕುಳಿತ ಯುವಕರು, ಮಾನವ ಸರಪಳಿ ನಿರ್ಮಿಸಿ ಹೆಚ್ ಕೆ ಪಾಟೀಲ ಪರ ಘೋಷಣೆ ಕೂಗಿದರು. ಇದಕ್ಕೆ ಸಾಥ್ ನೀಡಿದ ಮಹಿಳೆಯರು ಜೈಕಾರ ಹಾಕಿದರು.

ತೆರೆದ ವೇದಿಕೆ ಮೇಲೆ ಮಾತನಾಡಿದ ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಬಿ.ಬಿ.ಅಸೂಟಿ, ಹಾವೇರಿ ಜಿಪಂ ಮಾಜಿ ಅಧ್ಯಕ್ಷ ಕೊಟ್ರಪ್ಪ ಬಸೇಗಣ್ಣಿ, ಮಹಿಳಾ ನಾಯಕಿ ಸುಜಾತಾ ದೊಡ್ಡಮನಿ, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಗುರಣ್ಣ ಬಳಗಾನೂರ ಸೇರಿದಂತೆ ಹಲವರು ಮಾತನಾಡಿ ಎಚ್.ಕೆ.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕು ಎಂದರು.

## ಓರಿಯಂಟಲ್ ವಿಮಾ ಕಂಪನಿ ರೈತರಿಗೆ ಅನ್ಯಾಯವೆಸಗಿದೆ : ಪರಮೇಶ್ವರಪ್ಪ ಅಂದಲಗಿ

ಶಿರಹಟ್ಟಿ: ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ 2025-26 ನೇ ಸಾಲಿನ ಮುಂಗಾರು ಹಂಗಾಮಿನ ಕೆಂಪು ಮೆಣಸಿನಕಾಯಿ ಬೆಳೆಗೆ ಗದಗ ಜಿಲ್ಲೆಯ ರೈತರು ವಿಮೆಯನ್ನು ಕಟ್ಟಿರುತ್ತಾರೆ. ಅರ್ಜಿಗಳನ್ನು ಪರಿಶೀಲನೆ ಮಾಡದೇ ತೋಟಗಾರಿಕೆ ಇಲಾಖೆ, ವಿಮೆ ಕಂಪನಿಯವರು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ಮಾಡಿರುವ ಕ್ರಾಫ್ ಸರ್ವೇ ಅವೈಜ್ಞಾನಿಕವಾಗಿದೆ. ಅರ್ಜಿ ಸಲ್ಲಿಸಿದ ಎಲ್ಲ ರೈತರಿಗೆ ವಿಮೆ ಬಂದಿರುವದಿಲ್ಲ ಇದನ್ನು ಮರು ಪರಿಶೀಲನೆ ಮಾಡಬೇಕೆಂದು ರೈತರು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಿಗೆ ಮನವಿ ಸಲ್ಲಿಸಿದರು.





ಈ ವೇಳೆ ಲಕ್ಷ್ಮೇಶ್ವರ ತಾಲೂಕಿನ ಬಿಜೆಪಿಯ ರೈತ ಮೋರ್ಚಾ ಅಧ್ಯಕ್ಷ ಪರಮೇಶ್ವರಪ್ಪ ಅಂದಲಗಿ ಮಾತನಾಡುತ್ತಾ, ಫಸಲ್ ಭೀಮಾ ಯೋಜನೆಯಡಿ ಕೆಂಪು ಮೆಣಸಿನಕಾಯಿಗೆ 38177 ಅರ್ಜಿಗಳು ಸ್ವೀಕೃತವಾಗಿವೆ. ಆದರೆ 9687 ಪ್ರಸ್ತಾವನೆಗಳಲ್ಲಿ ಕೆಂಪು ಮೆಣಸಿನಕಾಯಿ ಬೆಳೆ ಇದೆ. 4755 ಪ್ರಸ್ತಾವನೆಗಳ ಬೆಳೆ ಸಮೀಕ್ಷೆಯಲ್ಲಿ ಅಧಿಕಾ-ರಿಗಳು ಪಾಳೆಂದು ನಮೂದಿಸಿದ್ದಾರೆ. ಸಮೀಕ್ಷೆ ಸಮರ್ಪಕವಾಗಿ ನಡೆಯದೇ ಇರುವದರಿಂದ ರೈತರಿಗೆ ಅನ್ಯಾಯ ಮಾಡಿದ್ದಾರೆ ಎಂದು ಆರೋಪಿಸಿದರು.

ಕೆಂಪು ಮೆಣಸಿನಕಾಯಿ ಬೆಳೆ ಬೆಳೆದ ರೈತರು ವಿಮೆಯನ್ನು ಕಟ್ಟಿದ್ದಾರೆ. ಅವರಿಗೆ ವಿಮೆ ಹಣ ಜಮಾ ಆಗದೇ ಮೆಕ್ಕೆಜೋಳ, ಹೆಸರು, ಶೇಂಗಾ ಹಾಗೂ ಈರುಳ್ಳಿ ಬೆಳೆದ ರೈತರ ಖಾತೆಗೆ ಹಣ ಜಮಾ ಆಗಿದೆ. ಇದರಿಂದ ಅರ್ಹ ಫಲಾನುಭವಿಗಳಿಗೆ ಓರಿಯಂಟಲ್ ಇನ್ಸುರೆನ್ಸ್ ಕಂಪನಿಯವರ ಎಡವಟ್ಟಿನಿಂದ ಮೋಸವಾಗಿದೆ. ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯ ನಿಯಮಗಳನ್ನು ಗಾಳಿಗೆ ತೂರಿ ಕಂಪನಿಯವರು ರೈತರಿಗೆ ತೊಂದರೆ ಕೊಟ್ಟಿದ್ದಾರೆ. 8-10 ದಿನಗಳಲ್ಲಿ ಈ ಸಮಸ್ಯೆಯನ್ನು ಅಧಿಕಾರಿಗಳು ಬಗೆಹರಿಸದೇ ಹೋದರೆ,ತೋಟಗಾರಿಕೆ ಇಖಾಲೆಯ ಮುಂದೆ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಹನಮಂತರೆಡ್ಡಿ ಪಾಟೀಲ, ಶಿವಪ್ಪ ದಾನಿ, ಎಸ್ ಜಿ. ಕಟಗಿ, ಶಿವಾಜಿ ಹುಬ್ಬಳ್ಳಿ, ಈರನಗೌಡ ಪಾಣಿಗಟ್ಟಿ, ನಾಗರಾಜ ಮಜ್ಜಿಗುಡ್ಡದ, ಬಸವರಾಜ ವಡವಿ, ಎಂ ಸಿ. ಪೂಜಾರ, ಚಂದ್ರಶೇಖರ ದಾನಿ ಹಾಗೂ ಅನೇಕ ರೈತರು ಇದ್ದರು.

## ರೋಣ ಶಾಸಕ ಜಿ.ಎಸ್ ಪಾಟೀಲರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ, ಇಂದು ತುಮಕೂರಿನ ಸಿದ್ಧಗಂಗಾ ಮಠದಿಂದ ಬೆಂಗಳೂರುವರೆಗೆ ಪಾದಯಾತ್ರೆ

ತುಮಕೂರು : ಪಟ್ಟಣದ ಸಿದ್ಧಗಂಗಾ ಮಠದಿಂದ ಗದಗ ಜಿಲ್ಲೆ ರೋಣ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಎಸ್ ಪಾಟೀಲ ಅವರಿಗೆ ಸಿಎಂ ಡಿಕೆ ಶಿವಕುಮಾರ ಸಂಪುಟದಲ್ಲಿ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ಹಮ್ಮಿಕೊಳ್ಳಲಾದ ತುಮಕೂರಿನಿಂದ ಬೆಂಗಳೂರುವರೆಗಿನ ಪಾದಯಾತ್ರೆ ಸಿದ್ಧಗಂಗಾಮಠದಿಂದ ಆರಂಭಗೊಳ್ಳಲಿದೆ.



ರೋಣ ವಿಧಾನಸಭಾ ಕ್ಷೇತ್ರದಿಂದ ಪ್ರತಿ ಬೂತ್ ಮಟ್ಟದಿಂದಲೂ ಆಗಮಿಸಿರುವ ಜಿ.ಎಸ್ ಪಾಟೀಲ ಅಭಿಮಾನಿಗಳು ಹಾಗೂ ಸಹಸ್ರಾರು ಹಿತೈಷಿಗಳು ತಮ್ಮ ನಾಯಕನಿಗೆ ಸಚಿವ ಸ್ಥಾನ ನೀಡುವಂತೆ ಪಕ್ಷದ ಮುಖಂಡರಿಗೆ ಹಕ್ಕೊತ್ತಾಯ ಮಾಡಲು ಪಾದಯಾತ್ರೆಗೆ ಸಜ್ಜಾಗಿದ್ದಾರೆ. ಕಳೆದ ನಾಲ್ಕು ದಶಕಗಳಿಂದಲೂ ರಾಜ-ಕೀಯದಲ್ಲಿರುವ ಜಿ.ಎಸ್ ಪಾಟೀಲರು ಪ್ರಸ್ತುತವೂ ರೋಣ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದು, ಸಾವಿರ ಕೆರೆಗಳ ಸರದಾರರೆಂದೇ ಖ್ಯಾತಿ ಹೊಂದಿದ್ದಾರೆ.ಜೊತೆಗೆ ಪಕ್ಷ ನಿಷ್ಠೆ ಹೊಂದಿರುವ ಪಾಟೀಲರು ಕಾಂಗ್ರೆಸ್ ಪಕ್ಷದ ಗದಗ ಜಿಲ್ಲಾ ಅಧ್ಯಕ್ಷರಾಗಿ ಪಕ್ಷ ಸಂಘಟನೆಯಲ್ಲೂ ಮುಂಚೂಣಿಯಲ್ಲಿದ್ದಾರೆ. ಸರಳ ಸೌಮ್ಯ ಸ್ವಭಾವದ ಜಿ.ಎಸ್ ಪಾಟೀಲರಿಗೆ ಈ ಬಾರಿ ಸಚಿವ ಸ್ಥಾನ ಕೊಡಲೇಬೇಕೆಂಬ ಪಟ್ಟು ಅವರ ಅಭಿಮಾನಿಗಳದಾಗಿದ್ದು, ಈ ಪಾದಯಾತ್ರೆ ಫಲಿಸಲಿ ಎಂಬುದು ಸಿದ್ಧಗಂಗಾ ಶ್ರೀಗಳಲ್ಲಿ ಹೊತ್ತ ಹರಕೆಯಾಗಿದ್ದು, ಈ ಪಾದಯಾತ್ರೆಯಲ್ಲಿ ಬೂತ್, ಬ್ಲಾಕ್, ತಾಲ್ಲೂಕು ಹಾಗೂ ಜಿಲ್ಲಾಮಟ್ಟದಲ್ಲಿರುವ ಪಕ್ಷದ ಪದಾಧಿಕಾರಿಗಳು ಭಾಗಿಯಾಗುವುದಾಗಿ ಪಾದಯಾತ್ರೆಯ ಆಯೋಜಕರು ತಿಳಿಸಿದ್ದಾರೆ.

# ಸ್ವಚ್ಛತೆ ದೇವರಿಗೆ ಸಮ ; ಘನ ತ್ಯಾಜ್ಯ ನಿರ್ವಹಣೆಯಲ್ಲಿ ಎಲ್ಲರೂ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು : ಜಿಲ್ಲಾಧಿಕಾರಿ

ಗದಗ: ಸ್ವಚ್ಛತೆ ದೇವರಿಗೆ ಸಮಾನವಾಗಿದ್ದು, ನಮ್ಮ ದೇಹವನ್ನು ಹೇಗೆ ಸ್ವಚ್ಛವಾಗಿ ಇಟ್ಟುಕೊಳ್ಳುತ್ತೇವೆಯೋ ಅದೇ ರೀತಿ ನಮ್ಮ ಸುತ್ತ ಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಸ್ವಚ್ಛ ವಾತಾವರಣದಿಂದ ಅನಾರೋಗ್ಯವನ್ನು ದೂರವಿಡಲು ಸಾಧ್ಯವಾಗುತ್ತದೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಹೇಳಿದರು.

ನಗರದ ಜಿಲ್ಲಾಡಳಿತ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಹಾಗೂ ನಗರಸಭೆ ಗದಗ-ಬೆಟಗೇರಿ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್ ದಲ್ಲಿ ಮಂಗಳವಾರ (ಜೂನ್ 16) ರಂದು ಆಯೋಜಿಸಿದ್ದ ಪೌರಕಾರ್ಮಿಕ-ರಿಗೆ ಹಾಗೂ ಸ್ವಚ್ಛತಾ ಕೆಲಸಗಾರರಿಗೆ ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮಗಳು-2026 ಮತ್ತು ಸ್ವಚ್ಛತಾ ಪರಿಕರಗಳ ಬಳಕೆ ಕುರಿತು ತಿಳುವಳಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಇಂದಿನ ದಿನಗಳಲ್ಲಿ ಘನ ತ್ಯಾಜ್ಯ ನಿರ್ವಹಣೆ ಅತ್ಯಂತ ಮಹತ್ವದ ವಿಷಯವಾಗಿದ್ದು, ಕಸವನ್ನು ಹಸಿಕಸ, ಒಣಕಸ, ಸ್ಯಾನಿಟರಿ ತ್ಯಾಜ್ಯ ಹಾಗೂ ವಿಶೇಷ ಕಾಳಜಿ ತ್ಯಾಜ್ಯ ಎಂಬ ನಾಲ್ಕು ವಿಭಾಗಗಳಲ್ಲಿ ವಿಂಗಡಿಸಲಾಗುತ್ತಿದೆ. ತ್ಯಾಜ್ಯವನ್ನು ಮೂಲದಲ್ಲಿಯೇ ಪ್ರತ್ಯೇಕಿಸುವುದರಿಂದ ಅದರ ಸಮರ್ಪಕ ನಿರ್ವಹಣೆ ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಹೆಚ್ಚು ನೀರು ಬಳಸುವ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದ ಘನ ತ್ಯಾಜ್ಯ ಉತ್ಪತ್ತಿಯಾಗುತ್ತದೆ. ಇಂತಹ ಸ್ಥಳಗಳತ್ತ ವಿಶೇಷ ಗಮನ ಹರಿಸಿ ವೈಜ್ಞಾನಿಕ ರೀತಿಯಲ್ಲಿ ತ್ಯಾಜ್ಯ ನಿರ್ವಹಣೆ ಮಾಡಬೇಕಾಗಿದೆ ಎಂದು ಅವರು ಹೇಳಿದರು. ಘನ ತ್ಯಾಜ್ಯ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ಜಾ-ರಿಗೊಳಿಸುವ ಉದ್ದೇಶದಿಂದ ಸರ್ಕಾರ ನಿಯಮಗಳನ್ನು ರೂಪಿಸಿದ್ದು, ಎಲ್ಲರೂ ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ನಗರಗಳ ಬೆಳವಣಿಗೆ ಮತ್ತು ಜನಸಂಖ್ಯೆ




ಹೆಚ್ಚಳದೊಂದಿಗೆ ತ್ಯಾಜ್ಯದ ಪ್ರಮಾಣವೂ ಹೆಚ್ಚುತ್ತಿದ್ದು, ಅದರ ವೈಜ್ಞಾನಿಕ ವಿಲೇವಾರಿ ಪರಿಸರ ಸಂರಕ್ಷಣೆ ಮತ್ತು ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಅತ್ಯಗತ್ಯವಾಗಿದೆ ಎಂದು ಸಿ ಎನ್ ಶ್ರೀಧರ ತಿಳಿಸಿದರು. ತ್ಯಾಜ್ಯವನ್ನು ಮೂಲದಲ್ಲಿಯೇ ವಿಂಗಡಿಸುವುದು, ಮರುಬಳಕೆ ಹಾಗೂ ಮರುಸಂಸ್ಕರಣೆಗೆ ಆದ್ಯತೆ ನೀಡುವುದ-ರಿಂದ ಸ್ವಚ್ಛ ಮತ್ತು ಆರೋಗ್ಯಕರ ಪರಿಸರ ನಿರ್ಮಾಣ ಸಾಧ್ಯವಾಗುತ್ತದೆ ಎಂದರು. ಸ್ವಚ್ಛತೆ ಮತ್ತು ಸಾರ್ವಜನಿಕ ಆರೋಗ್ಯ ಕಾಪಾಡುವಲ್ಲಿ ಪೌರಕಾರ್ಮಿಕರು ಹಾಗೂ ಸ್ವಚ್ಛತಾ ಕೆಲಸಗಾರರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಅವರು ಪ್ರತಿನಿತ್ಯ ಹಲವಾರು ಸವಾಲಿನ ಪರಿಸ್ಥಿತಿಗಳಲ್ಲಿ ಕಾರ್ಯನಿರ್ವಹಿಸುತ್ತಾರೆ. ತ್ಯಾಜ್ಯ ಸಂಗ್ರಹಣೆ, ಚರಂಡಿ ಸ್ವಚ್ಛತೆ ಹಾಗೂ ತ್ಯಾಜ್ಯ ವಿಂಗಡಣೆ ವೇಳೆ ಆರೋಗ್ಯ ಮತ್ತು ಸುರಕ್ಷತೆಗೆ ಸಂಬಂಧಿಸಿದ ಅಪಾಯಗಳು ಎದುರಾಗುತ್ತವೆ. ಆದ್ದರಿಂದ ಕೈಗವಸು, ಮುಖಗವಸು, ಸುರಕ್ಷತಾ ಬೂಟು, ರಿಫ್ಲೆಕ್ಟಿವ್ ಜಾಕೆಟ್ ಸೇರಿದಂತೆ ಅಗತ್ಯ ರಕ್ಷಣಾ ಸಾಧನಗಳನ್ನು ಕಡ್ಡಾಯವಾಗಿ ಬಳಸಬೇಕು. ಇದರಿಂದ ಅಪಘಾತಗಳು ಮತ್ತು ಸೋಂಕುಜನ್ಯ ಕಾಯಿಲೆಗಳಿಂದ ರಕ್ಷಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಜಿಲ್ಲಾಧಿಕಾರಿ ಸಿ ಎನ್ ಶ್ರೀಧರ ಹೇಳಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ದಿವಾಣಿ ನ್ಯಾಯದೀಶ ಸಿ.ಎಸ್. ಶಿವನಗೌಡ್ರ ಮಾತನಾಡಿ ಸಮಾಜದ ಸ್ವಚ್ಛತೆಗೆ ಶ್ರಮಿಸುವ ಪೌರಕಾರ್ಮಿಕರಿಗಾಗಿ ಇಂತಹ ವಿಶೇಷ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಅತ್ಯಂತ ಶ್ಲಾಘನೀಯ. ಪೌರಕಾರ್ಮಿಕರ ಸಮಸ್ಯೆಗಳನ್ನು ಕೇವಲ ದೂರು-ದುಮ್ಮಾನಗಳ ಮೂಲಕ ನೋಡುವುದಕ್ಕಿಂತ, ಅವರ ನಿಜವಾದ ಸಮಸ್ಯೆಗಳೇನು ಮತ್ತು ಅದಕ್ಕೆ ಕಾನೂನಾತ್ಮಕ ಪರಿಹಾರಗಳೇನು ಎಂಬುದನ್ನು ಮನವ-ರಿಕೆ ಮಾಡಿಕೊಡುವುದು ಇಂದಿನ ಅಗತ್ಯವಾಗಿದೆ ಎಂದು ತಿಳಿಸಿದರು.

2013ರ ಕಾಯ್ದೆ ಮತ್ತು ಪೌರಕಾರ್ಮಿಕರ ಹಕ್ಕುಗಳು: 2013ಕ್ಕೂ ಮುನ್ನ ಪೌರಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವ ಕಟ್ಟುನಿಟ್ಟಾದ ಕಾನೂನು ಇರಲಿಲ್ಲ. ಆದರೆ 2013 ರಲ್ಲಿ ಜಾರಿಗೆ ಬಂದ 'ಮ್ಯಾನುವಲ್ ಸ್ಕ್ಯಾವೆಂಜರ್ಸ್ ನಿಷೇಧ ಮತ್ತು ಪುನರ್ವಸತಿ ಕಾಯ್ದೆ'ಯು (Prohibition of Employment as Manual Scavengers and their Re-habilitation Act, 2013) ಮನುಷ್ಯನೇ ಮನುಷ್ಯನ ಮಲ ಹೊರುವುದನ್ನು ಮತ್ತು ಸುರಕ್ಷತಾ ಪರಿಕರಗಳಿಲ್ಲದೆ ಅಪಾಯಕಾರಿ ಸ್ಥಳಗಳ ಕಸದ ಗುಂಡಿಗೆ ಇಳಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಈ ಕಾಯ್ದೆಯಡಿ ಪ್ರತಿಯೊಂದು ಜಿಲ್ಲೆ ಮತ್ತು ತಾಲೂಕುಗಳಲ್ಲಿ ಮ್ಯಾನುವಲ್ ಸ್ಕ್ಯಾವೆಂಜರ್ಸ್‌ಗಳ ಸಮೀಕ್ಷೆ ನಡೆಸಿ, ಅವರನ್ನು ಗುರುತಿಸಿ, ಕೇವಲ ಗುರುತಿಸುವುದಷ್ಟೇ ಅಲ್ಲದೆ ಅವರಿಗೆ ಕಡ್ಡಾಯವಾಗಿ ಪುನರ್ವಸತಿ ಕಲ್ಪಿಸಬೇಕು ಹಾಗೂ ಪರ್ಯಾಯ ಉದ್ಯೋಗಕ್ಕಾಗಿ ಸೂಕ್ತ ತರಬೇತಿಯನ್ನು ನೀಡಬೇಕು ಎಂದು ಕಾಯ್ದೆ ಸ್ಪಷ್ಟಪಡಿಸುತ್ತದೆ. ಈ ನಿಯಮವನ್ನು ಉಲ್ಲಂಘಿಸಿ ಯಾರಾದರೂ ಪೌರಕಾರ್ಮಿಕರನ್ನು ಇಂತಹ ಅಪಾಯಕಾರಿ ಕೆಲಸಗಳಿಗೆ ಒತ್ತಾಯಿಸಿದರೆ ಅವರಿಗೆ 2 ರಿಂದ 5 ವರ್ಷಗಳವರೆಗೆ ಕಠಿಣ ಶಿಕ್ಷೆ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ ಎಂದು ಅವರು ವಿವರಿಸಿದರು. ಪೌರಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಸದಾ ಸಿದ್ಧವಿದೆ. ಸರ್ಕಾರದಿಂದ ಸಿಗುವ ಸೌಲತ್ತುಗಳಾದ ಶೇಕಡಾ 50ರಷ್ಟು ಸಹಾಯಧನದೊಂದಿಗೆ ಸಾಲ ಸೌಲಭ್ಯ, ವಸತಿ ಸೌಲಭ್ಯ ಅಥವಾ ಒನ್-ಟೈಮ್ ಅಸಿಸ್ಟೆನ್ಸ್ ಮುಂತಾದ ಯೋಜನೆಗಳ ಲಾಭ ಪಡೆಯಲು ಯಾವುದೇ ತೊಂದರೆಯಾಗಿದ್ದಲ್ಲಿ, ಅಥವಾ ನಿಮ್ಮ ಹಕ್ಕುಗಳ ಉಲ್ಲಂಘನೆಯಾಗಿದ್ದಲ್ಲಿ ಪ್ರಾಧಿಕಾರವನ್ನು ಸಂಪರ್ಕಿಸಬಹುದು. ಪ್ರಾಧಿಕಾರದ 'ಫ್ರಂಟ್ ಆಫೀಸ್' ಮೂಲಕ ಪೌರಕಾರ್ಮಿಕರಿಗೆ ಉಚಿತವಾಗಿ ವಕೀಲರ ಸೌಲಭ್ಯ ಹಾಗೂ ಕಾನೂನು ನೆರವನ್ನು ಒದಗಿಸಲಾಗುವುದು. ನಿಮ್ಮ ಹಕ್ಕುಗಳಿಗಾಗಿ ನ್ಯಾಯಯುತವಾಗಿ ಹೋರಾಡುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಿ ಎಂದು ಕರೆ ನೀಡಿದರು.

ನಗರದ ಪ್ರತಿಯೊಬ್ಬ ನಾಗರಿಕನೂ ನೆಮ್ಮದಿಯಿಂದ ಉಸಿರಾಡಲು ಮತ್ತು ಸ್ವಚ್ಛವಾಗಿ ಬದುಕಲು ಪೌರಕಾರ್ಮಿಕರೇ ಕಾರಣ. ಹೀಗಾಗಿ ನಿಮ್ಮ ಆರೋಗ್ಯದ ಕಡೆಗೆ ನೀವು ಹೆಚ್ಚಿನ ಗಮನ ಹರಿಸಬೇಕು. ಯಾವುದೇ ಕಾರಣಕ್ಕೂ ಸುರಕ್ಷತಾ ಉಪಕರಣಗಳಿಲ್ಲದೆ ನೇರವಾಗಿ ಕೈಗಳಿಂದ ಕಸವನ್ನು ಮುಟ್ಟಬೇಡಿ. ಅಧಿಕಾ-ರಿಗಳು ಒದಗಿಸುವ ಮಾಸ್ಕ್, ಗ್ಲೌಸ್ ಸೇರಿದಂತೆ ಆಧುನಿಕ ಯಂತ್ರೋಪಕರಣಗಳನ್ನು ಕಡ್ಡಾಯವಾಗಿ ಬಳಸಿ ಕೆಲಸ ಮಾಡಿ. ಇದರೊಂದಿಗೆ, ನಿಮ್ಮ ಆರೋಗ್ಯ ಮತ್ತು ಮಕ್ಕಳಿಗೆ ಶಿಕ್ಷಣಕ್ಕೆ ಆದ್ಯತೆ ನೀಡಿ ಕಡ್ಡಾಯವಾಗಿ ಉತ್ತಮ ಶಿಕ್ಷಣವನ್ನು ಕೊಡಿಸಿ. ಡಾ. ಬಿ.ಆರ್. ಅಂಬೇಡ್ಕರ್ ಅವರು ಹೇಳಿದಂತೆ ಸಮಾಜದ ಮುಖ್ಯವಾಹಿನಿಗೆ ಬರಲು ಶಿಕ್ಷಣವೇ ಏಕೈಕ ಮಾರ್ಗ. ಮುಂದಿನ ಪೀಳಿಗೆಯು ಸಮಾಜದ ಎಲ್ಲಾ ಉನ್ನತ ಸ್ಥಾನಗಳಲ್ಲಿ ಗುರುತಿಸಿಕೊಳ್ಳುವಂತಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಪೌರಕಾರ್ಮಿಕರೊಬ್ಬರು ಕಳೆದ 20 ದಿನಗಳಿಂದ ಸಂಬಳ ಆಗದಿರುವ ಬಗ್ಗೆ ನ್ಯಾಯಾಧೀಶರ ಗಮನಕ್ಕೆ ತಂದಾಗ, ತಕ್ಷಣವೇ ಸ್ಪಂದಿಸಿದ ನ್ಯಾಯಾಧೀಶರು, ಯಾವುದೇ ತಾಂತ್ರಿಕ ತೊಂದರೆಗಳಿದ್ದಲ್ಲಿ ಅಧಿಕಾರಿಗಳು ಪೌರಕಾರ್ಮಿಕರಿಗೆ ಸೂಕ್ತ ಮಾಹಿತಿ ನೀಡಿ ಅದನ್ನು ಬಗೆಹರಿಸಬೇಕು. ಪೌರಕಾರ್ಮಿಕರ ವೇತನ ಪಾವತಿಯಲ್ಲಿ ವಿಳಂಬ ಧೋರಣೆ ತೋರಬಾರದು. ಒಂದು ವೇಳೆ ಜಿಲ್ಲಾ ಮಟ್ಟದಲ್ಲಿ ಸಮಸ್ಯೆ ಬಗೆಹ-ರಿಯದಿದ್ದರೆ ಅದನ್ನು ರಾಜ್ಯ ಸರ್ಕಾರದ ಗಮನಕ್ಕೆ ತಂದು ಮನವರಿಕೆ ಮಾಡಿಕೊಡಬೇಕು ಎಂದು ಪುರಸಭೆಯ ಮುಖ್ಯ ಅಧಿಕಾರಿಗೆ (ಋಜಜಿ ಔಜಿಜಿಛಿಜಡಿ) ಕಟ್ಟುನಿಟ್ಟಿನ ಸೂಚನೆ ನೀಡಿದರು. ಅಲ್ಲದೆ, ಕಸ ವಿಂಗಡಣೆ (ಒಣ ಕಸ ಮತ್ತು ಹಸಿ ಕಸ) ಮಾಡುವುದು ಸಾರ್ವಜನಿಕರ ಕರ್ತವ್ಯವಾಗಿದ್ದು, ಪೌರಕಾರ್ಮಿಕರಿಗೆ ಸಹಕರಿಸುವಂತೆ ಜನರಲ್ಲಿ ಜಾಗೃತಿ ಮೂಡಿಸಬೇಕಿದೆ ಎಂದರು.


4ನೇ ಪುಟಕ್ಕೆ....

# ಚಿಕ್ಕಮಗಳೂರು, : ಪ್ಲಾಸ್ಟಿಕ್ ಚೀಲದಲ್ಲಿ ನವಜಾತ ಶಿಶು ಪತ್ತೆ

ಚಿಕ್ಕಮಗಳೂರು: ನಗರದಲ್ಲಿ ಅಮಾನವೀಯ ಘಟನೆಯೊಂದು ಬೆಳಕಿಗೆ ಬಂದಿದ್ದು, ನಗರದ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಸಮೀಪದ ನಿರ್ಜನ ಪ್ರದೇಶದ ಪೊದೆಯೊಳಗೆ ಪ್ಲಾಸ್ಟಿಕ್ ಚೀಲದಲ್ಲಿ ನವಜಾತ ಗಂಡು ಶಿಶುವಿನ ಶವ ಪತ್ತೆಯಾಗಿದೆ.



ಸ್ಥಳೀಯರು ಪೊದೆಯೊಳಗೆ ಅನುಮಾನಾಸ್ಪದವಾಗಿ ಬಿದ್ದಿದ್ದ ಪ್ಲಾಸ್ಟಿಕ್ ಚೀಲವನ್ನು ಗಮನಿಸಿದ ವೇಳೆ ಅದರೊಳಗೆ ಕೇವಲ ಒಂದೇ ದಿನದ ಗಂಡು ಮಗುವಿನ ಮೃತದೇಹ ಪತ್ತೆಯಾಗಿದೆ. ಮಗು ಸಾವನ್ನಪ್ಪಿದ ಬಳಿಕ ಅಂತ್ಯಸಂಸ್ಕಾರ ನಡೆಸದೆ, ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ ನಿರ್ಜನ ಪ್ರದೇಶದಲ್ಲಿ ಎಸೆದು ಮಾನವೀಯತೆ ಮರೆತ ಕೃತ್ಯಕ್ಕೆ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಗು ಆಸ್ಪತ್ರೆಯಲ್ಲಿ ಜನಿಸಿದ್ದಿರಬಹುದೆಂಬ ಅನುಮಾನ ಮೂಡಿದ್ದು, ಜನನದ ಬಳಿಕ ಹೊಕ್ಕಳು ಬಳ್ಳಿಗೆ ಹಾಕುವ ವೈದ್ಯಕೀಯ ಕ್ಲಿಪ್ ಹಾಗೆಯೇ ಇರುವುದು ಪತ್ತೆಯಾಗಿದೆ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆಯೇ ನಗರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಜಿಲ್ಲಾಸ್ಪತ್ರೆಗೆ ರವಾನಿಸಿದ್ದಾರೆ. ಅಲ್ಲದೆ ಸುತ್ತಮುತ್ತಲಿನ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸುತ್ತಿರುವ ಪೊಲೀಸರು, ಮಗುವನ್ನು ಇಲ್ಲಿ ತಂದು ಎಸೆದವರ ಪತ್ತೆಗೆ ಜಾಲ ಬೀಸಿದ್ದಾರೆ. ಈ ಸಂಬಂಧ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಅಮಾಯಕ ನವಜಾತ ಶಿಶುವಿನ ಶವವನ್ನು ಪೊದೆಯೊಳಗೆ ಎಸೆದು ಹೋದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

# ಪಬ್‌ನಲ್ಲಿ ಬೆಂಕಿ ಪ್ರಕರಣ : ಅಬಕಾರಿ ಡಿಸಿ ಅಮಾನತು

ಮೈಸೂರು: ಪಬ್‌ನಲ್ಲಿ ಬೆಂಕಿ ಅವಘಡ ಪ್ರಕರಣ-ಕ್ಕೆ ಸಂಬಂಧಿಸಿದಂತೆ ಅಬಕಾರಿ ಡಿಸಿ ಅಮಾನತಿಗೆ ಶಿಫಾರಸು ಮಾಡಲಾಗಿದೆ ಹಾಗೂ ಪಬ್ ಮಾಲೀಕರ ವಿರುದ್ಧ ದೂರು ದಾಖಲು ಮಾಡಲಾಗಿದ್ದು, ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ನಗರಾಭಿವೃದ್ಧಿ ಸಚಿವರಾದ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.




ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವುದೇ ಲೈಸೆನ್ಸ್ ಇಲ್ಲದೆ ಪಬ್ ನಡೆಯುತ್ತಿತ್ತು. ಮೈಸೂ-ರಿನಲ್ಲಿ ಅನೇಕ ಪಬ್, ಬಾರ್ ಅಂಡ್ ರೆಸ್ಟೋರೆಂಟ್‌ಗಳು ಲೈಸೆನ್ಸ್ ಪಡೆಯದೆ ನಡೆಸುತ್ತಿರುವ ವಿಚಾರ ಗೊತ್ತಾಗಿದೆ. ಎಲ್ಲೆಲ್ಲಿ ಅಕ್ರಮ ಹಾಗೂ ಲೈಸೆನ್ಸ್ ಇಲ್ಲದೆ ಬಾರ್ ರೆಸ್ಟೋರೆಂಟ್ ನಡೆಯುತ್ತಿದೆ ಅಂಥವುಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಅಬಕಾರಿ ಡಿಸಿಗೆ ಸೂಚನೆ ಕೊಟ್ಟಿದ್ದೇನೆ ಎಂದರು. ಲೈಸೆನ್ಸ್ ಇಲ್ಲದೆ ಬಾರ್ ನಡೆಸುತ್ತಿದ್ದರೂ ಅಬಕಾರಿ ಡಿಸಿ ಕಣ್ಣುಚ್ಚಿ ಕುಳಿತಿದ್ದಾರೆ. ಅಧಿಕಾ-ರಿಗಳ ಮೇಲೂ ಕ್ರಮಕ್ಕೆ ಒತ್ತಾಯ ಕೇಳಿ ಬಂದಿದೆ. ಹೀಗಾಗಿ ಅಮಾನತು ಮಾಡುವಂತೆ ಶಿಫಾರಸು ಮಾಡುತ್ತೇನೆ. ಪೊಲೀಸ-ರಿಗೂ ಕೂಡ ಎಲ್ಲಾ ಕಡೆ ಪರಿಶೀಲನೆ ನಡೆಸಿ ಎಂದು ಸೂಚನೆ ನೀಡಿದ್ದೇನೆ. ಮೈಸೂರಿನ ಎಲ್ಲಾ ವಾಣಿಜ್ಯ ಕಟ್ಟಡಗಳಲ್ಲಿ ಅಗ್ನಿ ಸುರಕ್ಷತೆ ಬಗ್ಗೆ ಮುಂಜಾಗ್ರತೆ ಕ್ರಮ ತೆಗೆದುಕೊಂಡಿರುವ ಕುರಿತು ಪರಿಶೀಲನೆ ನಡೆಸಲು ಮತ್ತು ಇಂತಹ ಘಟನೆ ಮರುಕಳಿಸದಂತೆ ಕ್ರಮ ವಹಿಸಲು ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು. ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ 5 ನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದೇವೆ. ನಮ ಅಭ್ಯರ್ಥಿಗಳು ಗೆಲ್ಲುತ್ತಾರೆ. ಇಂದು ನಡೆಯುವ ಸಿ.ಎಲ್. ಪಿ ಸಭೆಯಲ್ಲಿ ನಾನು ಕೂಡ ಭಾಗಿಯಾಗುತ್ತೇನೆ ಎಂದ ಅವರು, ಬಿಡದಿ ಟೌನ್‌ಶಿಪ್ ಮಾಡುವುದು ಅತ್ಯವಶ್ಯಕ. ಶೇ.80ರಷ್ಟು ರೈತರು ಜಮೀನು ಕೊಡಲು ಒಪ್ಪಿದ್ದಾರೆ.ಕೆಲವರು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಇದರಲ್ಲಿ ಜೆಡಿಎಸ್ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿದರು. ಕೆಲವರ ಮಾತನ್ನು ಕೇಳಿ ಯೋಜನೆ ಕೈ ಬಿಡಲು ಆಗಲ್ಲ. ಬೆಂಗಳೂರು ಜನಸಂದಣಿ ಹೆಚ್ಚಾಗಿದೆ. ಜನರಿಗೆ ನಿವೇಶನದ ಅಗತ್ಯ ಇದೆ. ಬೆಂಗಳೂರು ವಿಸ್ತರಣೆಯ ಅವಶ್ಯಕತೆಯಂತೂ ಇದೆ. ರೈತರೊಂದಿಗೆ ಮಾತುಕತೆ ನಡೆಸಿ, ವಿಶ್ವಾಸಕ್ಕೆ ತೆಗೆದುಕೊಂಡು ಯೋಜನೆ ಮಾಡುತ್ತೇವೆ ಎಂದು ಅವರು ಹೇಳಿದರು.

# ಇಂಡೋನೇಷ್ಯಾದಲ್ಲಿ 6.7 ತೀವ್ರತೆ ಭೂಕಂಪನ

ಜಕಾರ್ತ: (ಎಪಿ) ಇಂಡೋನೇಷ್ಯಾದ ಒಂದು ಭಾಗದಲ್ಲಿ ಇಂದು 6.7 ತೀವ್ರತೆಯ ಭೂಕಂಪ ಸಂಭವಿಸಿದ್ದು, ನಂತರ ಹಲವಾರು ಬಲವಾದ ಕಂಪನಗಳು ಸಂಭವಿಸಿವೆ. ಆರಂಭಿಕ ಭೂಕಂಪವು ಒಂದು ನಿಮಿಷಕ್ಕೂ ಹೆಚ್ಚು ಕಾಲ ಬಲವಾದ ಕಂಪನಕ್ಕೆ ಕಾರಣವಾಯಿತು. ಹಾನಿ ಅಥವಾ ಸಾವುನೋವುಗಳ ಬಗ್ಗೆ ಯಾವುದೇ ಮಾಹಿತಿ ತಕ್ಷಣ ಲಭ್ಯವಿಲ್ಲ.



ಮಧ್ಯ ಸುಲಾವೆಸಿ ಪ್ರಾಂತ್ಯದ ರಾಜಧಾನಿ ಪಲುವಿನ ಪೂರ್ವ-ಆಗ್ನೇಯಕ್ಕೆ 46 ಕಿಲೋಮೀಟರ್ (29 ಮೈಲುಗಳು) ದೂರದಲ್ಲಿ ಭೂಕಂಪ ಕೇಂದ್ರೀಕೃತವಾಗಿದೆ. ಇದು ಸುಮಾರು 10 ಕಿಲೋಮೀಟರ್ (6 ಮೈಲುಗಳು) ಆಳದಲ್ಲಿದೆ ಎಂದು ಯುಎಸ್ ಭೂವೈಜ್ಞಾನಿಕ ಸಮೀಕ್ಷೆ ತಿಳಿಸಿದೆ. ಇಂಡೋನೇಷ್ಯಾ ಹಲವಾರು ಭೂಕಂಪನ ದೋಷಗಳಿಂದ ದಾಟಿದೆ ಮತ್ತು ಭೂಕಂಪಗಳು ಮತ್ತು ಜ್ವಾಲಾಮುಖಿ ಚಟುವಟಿಕೆಗಳು ಸಾಮಾನ್ಯವಾಗಿದೆ.

# ರಾಹುಲ್ ಗಾಂಧಿ ಒಬ್ಬ ಅಪ್ರಬುದ್ದ ಜೋಕರ್ : ಡಿಎಂಕೆ ಟೀಕೆ

ಚೆನ್ನೈ: ಕಾಂಗ್ರೆಸ್‌ನ ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ರಾಜಕೀಯ ಅಪ್ರಬುದ್ಧತೆ ಮತ್ತು ಮೈತ್ರಿ ಪಾಲುದಾರರನ್ನು ನಿರ್ವಹಿಸುವಲ್ಲಿ ಪಾರದರ್ಶಕತೆಯ ಕೊರತೆ ಹೊಂದಿದ್ದಾರೆ ಎಂದು ದ್ರಾವಿಡ ಮುನೇಟ್ರಂ ಕಝಗಂ(ಡಿಎಂಕೆ) ತೀವ್ರವಾಗಿ ಟೀಕಿಸಿದೆ. ಲೋಕಸಭಾ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್ ಪ್ರಾದೇಶಿಕ ಮಿತ್ರಪಕ್ಷಗಳನ್ನು ಅವಲಂಬಿಸಿದೆ. ಆದರೆ ರಾಜ್ಯ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಅವರ ವಿರುದ್ಧ ಕೆಲಸ ಮಾಡುತ್ತದೆ ಎಂದು ಡಿಎಂಕೆ ತನ್ನ ಅಧಿಕೃತ ಮುಖವಾಣಿ ಮುರಸೋಲಿಯಲ್ಲಿ ಆರೋಪಿಸಿದೆ.

ವಿಧಾನಸಭಾ ಚುನಾವಣೆಗಳು ನಡೆಯುವ ಒಂದರ ನಂತರ ಒಂದರಂತೆ ರಾಜ್ಯಗಳಲ್ಲಿ, ಸಹ ಭಾರತೀಯ ಬ್ಲಾಕ್ ಪಾಲುದಾರರು ಅಧಿಕಾರಕ್ಕೆ ಬರುವುದನ್ನು ತಡೆಯಲು ಕಾಂಗ್ರೆಸ್ ಸಾಧ್ಯವಿರುವ ಎಲ್ಲವನ್ನೂ ಮಾಡಿದೆ. ಆದರೂ ಸಂಸತ್ತಿನ ಚುನಾವಣೆಗಳು ಬಂದಾಗ, ಅದು ಬಿಜೆಪಿ ವಿರುದ್ಧ ಹೋರಾಡುವ ನೆಪದಲ್ಲಿ ಅವರ ಬೆಂಬಲವನ್ನು ಪಡೆಯುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಭಾರತ ಬ್ಲಾಕ್ ಸಭೆಯನ್ನು ಉಲ್ಲೇಖಿಸಿ,




ಮುರಸೋಲಿ ಹಲವಾರು ವಿರೋಧ ಪಕ್ಷದ ನಾಯಕರು ಕಾಂಗ್ರೆಸ್ ತನ್ನ ಮಿತ್ರಪಕ್ಷಗಳ ಬಗೆಗಿನ ಧೋರಣೆಯ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ್ದಾರೆ ಮತ್ತು ರಾಹುಲ್ ಗಾಂಧಿ ಟೀಕೆಗೆ ಸಿದ್ಧರಿಲ್ಲ ಎಂದು ಹೇಳಿದ್ದಾರೆ. ರಾಹುಲ್ ಗಾಂಧಿ ಇಂತಹ ಟೀಕೆಯನ್ನು ನಿರೀಕ್ಷಿಸಿರಲಿಲ್ಲ ಎಂದು ಡಿಎಂಕೆ ಮುಖವಾಣಿ ಹೇಳಿದೆ. ಬಿಜೆಪಿ ವಿರುದ್ಧ ವಿರೋಧ ಪಕ್ಷಗಳ ಒಗ್ಗಟ್ಟಿನ ಬಗ್ಗೆ ಚರ್ಚಿಸಲು ಕರೆಯಲಾದ ಸಭೆಯಲ್ಲಿ, ಕಾಂಗ್ರೆಸ್ ಸ್ವತಃ ಟೀಕೆಗೆ ಗುರಿಯಾಗಿ-ತ್ತು. ಇದಕ್ಕೆ ರಾಹುಲ್ ಗಾಂಧಿಯವರ ರಾಜ-ಕೀಯ ಅಪ್ರಬುದ್ಧತೆ ಮತ್ತು ಅಪ್ರಾಮಾಣಿಕತೆಯ ಹೊಣೆಗಾರಿಕೆ ಇದೆ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮಿದ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಅನ್ನು ಬೆಂಬಲಿಸಲು ಕಾಂಗ್ರೆಸ್ ನಿರ್ಧರಿಸಿದ ನಂತರ ಕಾಂಗ್ರೆಸ್ ಮತ್ತು ಡಿಎಂಕೆ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯ ಮಧ್ಯೆ ಈ ಹೇಳಿಕೆಗಳು ಬಂದಿವೆ. ಕಾಂಗ್ರೆಸ್ ನಿರ್ಧಾರವನ್ನು ದ್ರೋಹ ಎಂದು ಡಿಎಂಕೆ ಬಣ್ಣಿಸಿದೆ ಮತ್ತು ಇದು ಪಕ್ಷದ ಕಾರ್ಯಕರ್ತರಲ್ಲಿ ತೀವ್ರ ಅಸಮಾಧಾನವನ್ನು ಉಂಟುಮಾಡಿದೆ ಎಂದು ಹೇಳಿದೆ. ಪ್ರತಿಭಟನೆಯ ಭಾಗವಾಗಿ ಪಕ್ಷವು ಇತ್ತೀಚಿನ ಇಂಡಿಯಾ ಬ್ಲಾಕ್ ಸಭೆಯನ್ನು ಸಹ ಬಹಿಷ್ಕರಿಸಿದೆ. ಕೇರಳ ವಿಧಾನಸಭಾ ಚುನಾವಣೆಯ ಸಮಯದಲ್ಲಿ ತನ್ನ ನಾಯಕತ್ವದ ವಿರುದ್ಧ ವ್ಯವಸ್ಥಿತ ಅಭಿಯಾನ ಎಂದು ವಿವರಿಸಿದ್ದರ ಬಗ್ಗೆ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್ ವಾದಿ) ಅಥವಾ ಸಿಪಿಐ(ಎಂ) ಕಾಂಗ್ರೆಸ್‌ಗೆ ತನ್ನ ಕಳವಳಗಳನ್ನು ತಿಳಿಸಿದೆ ಎಂದು ವರದಿಯಾಗಿದೆ. ಆದಾಗ್ಯೂ, ಡಿಎಂಕೆಗಿಂತ ಭಿನ್ನವಾಗಿ, ಸಿಪಿಐ(ಎಂ) ಸಂಸದ ಜಾನ್ ಬ್ರಿಟಾಸ್ ಅವರನ್ನು ಇಂಡಿಯಾ ಬ್ಲಾಕ್ ಸಭೆಯಲ್ಲಿ ಭಾಗವಹಿಸಲು ಕಳುಹಿಸಿದೆ.

ಭವಿಷ್ಯದ ಚುನಾವಣಾ ಸ್ಪರ್ಧೆಗಳಿಗೆ ಮುಂಚಿತವಾಗಿ ಪಕ್ಷಗಳು ತಮ ಸಂಬಂಧಗಳನ್ನು ನಿರ್ಣಯಿಸುವುದನ್ನು ಮುಂದುವರಿಸುತ್ತಿರುವಾಗ, ಈ ಬೆಳವಣಿಗೆಗಳು ವಿರೋಧ ಪಕ್ಷದ ಮೈತ್ರಿಕೂಟದೊಳಗಿನ ಉದ್ವಿಗ್ನತೆಯ ಲಕ್ಷಣಗಳನ್ನು ಹೆಚ್ಚಿಸಿವೆ.

# ಅನರ್ಹ ಫಲಾನುಭವಿಗಳ ತಡೆಗೆ ಗ್ಯಾರಂಟಿ ಪರಿಷ್ಕರಣೆ : ದಿನೇಶ್ ಗೂಳಿಗೌಡ

ಬೆಂಗಳೂರು: ಗೃಹಲಕ್ಷ್ಮಿ ಮತ್ತು ಗೃಹಜ್ಯೋತಿ ಯೋಜನೆಗಳಿಗೆ ಸಂಬಂಧಿಸಿದಂತೆ ಕೂಲಂಕಷವಾಗಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಅವರು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಮಾಡಿದ್ದಾರೆ.

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳಿಗೆ ಪಾವತಿ ಮಾಡಿರುವ ಬಗ್ಗೆ ವಿವರಣೆ ನೀಡಿರುವ ಅವರು, ಪ್ರಸ್ತುತ 1,24,00,000 ಗೃಹಲಕ್ಷ್ಮಿ ಫಲಾನುಭವಿಗಳಿಗೆ 2,000 ರೂ.ಗಳಂತೆ ಪ್ರತಿ ಮಾಹೆ ರೂ.2,480 ಕೋಟಿ ಹಾಗೂ ಪ್ರತಿ ವರ್ಷ ರೂ.29,760 ಕೋಟಿಗಳನ್ನು ಪಾವತಿ ಮಾಡಲಾಗುತ್ತಿದೆ. ಏಪ್ರಿಲ್, 2026ರ ಅಂತ್ಯಕ್ಕೆ ರೂ.72,253 ಕೋಟಿಗಳನ್ನು ಪಾವತಿಸಲಾಗಿದೆ ಎಂದು ತಿಳಿಸಿದ್ದಾರೆ.

ಗೃಹಜ್ಯೋತಿ ಯೋಜನೆ ಯಡಿ 1.64 ಕೋಟಿ ಫಲಾನುಭವಿಗಳಿದ್ದು, 200 ಯುನಿಟ್ ಒಳಗೆ ಉಚಿತ ವಿದ್ಯುತ್ ಪಡೆಯುತ್ತಿದ್ದು, ಏಪ್ರಿಲ್, 2026ರ ಅಂತ್ಯಕ್ಕೆ ಇದರ ಮೊತ್ತ 26,115 ಕೋಟಿ ರೂ. ಗಳಾಗಿರುತ್ತದೆ. ಅನ್ನಭಾಗ್ಯ ಯೋಜನೆಯಡಿ ಈವರೆವಿಗೆ ಒಟ್ಟಾರೆ 18,897 ಕೋಟಿ ಪಾವತಿ ಮಾಡಲಾಗಿದೆ. ಶಕ್ತಿ ಯೋಜನೆಯಡಿ ಜೂ.10ರಂದು ಮಹಿಳಾ ಪ್ರಯಾಣಿಕರು 757.62 ಉಚಿತ ಟಿಕೆಟ್ ಪಡೆದಿದ್ದು, ಇದರ ಮೌಲ್ಯ 19,890 ರೂ. ಕೋಟಿಗಳಾಗಿದೆ. ಯುವನಿಧಿ ಯೋಜನೆ ಯಡಿ 3,59,000 ನಿರುದ್ಯೋಗಿ ಪದವೀಧರರು/ಡಿಪ್ಲೋಮಾ ಪದವೀಧರರಿಗೆ ತಲಾ 3000 ರೂ. ಮತ್ತು 1,500 ರೂ.ಗಳಂತೆ ಈವರೆವಿಗೆ .1115 ಕೋಟಿ ರೂ.ಗಳು ಪಾವತಿ ಮಾಡಲಾಗಿರುತ್ತದೆ. ಒಟ್ಟಾರೆ ಐದು ಪಂಚ ಗ್ಯಾರಂಟಿ ಯೋಜನೆಗಳಿಗೆ ಈವರೆವಿಗೂ ಕರ್ನಾಟಕ ಸರ್ಕಾರ ಒಟ್ಟು 1,38,270.21 ಕೋಟಿ ರೂ.ಗಳನ್ನು ಪಾವತಿ ಮಾಡಲಾಗಿದೆ.

ಮಾರ್ಚ್ 2026ರ ಅಂಕಿ ಅಂಶಗಳಂತೆ ಗೃಹಲಕ್ಷ್ಮಿ ಫಲಾನುಭವಿಗಳಲ್ಲಿ ಮರಣ ಹೊಂದಿರುವ 1,95,224 ಫಲಾನುಭವಿಗಳಿಗೆ 2000 ರೂ.ಗಳಂತೆ ಪ್ರತಿ ತಿಂಗಳು ರೂ.39.05 ಕೋಟಿಗಳು ಹಾಗೂ ವಾರ್ಷಿಕ 468.54 ಕೋಟಿ ರೂ. ಪಾವತಿಯಾಗುವುದನ್ನು ತಡೆಯಲು ಅಗತ್ಯ ಕ್ರಮವಹಿಸಬಹುದು. ಅದೇ ರೀತಿ ಮಾರ್ಚ್ 2026ರ ಅಂಕಿ ಅಂಶಗಳಂತೆ



ಗೃಹಲಕ್ಷ್ಮಿ ಫಲಾನುಭವಿಗಳಲ್ಲಿ ಐ.ಟಿ./ಜಿ.ಎಸ್.ಟಿ. ಪಾವತಿಸುತ್ತಿರುವ 1,94,560 ಫಲಾನುಭವಿಗಳಿಗೆ 2000 ರೂ.ಗಳಂತೆ ಪ್ರತಿ ತಿಂಗಳು ರೂ.38.91 ಕೋಟಿಗಳು ಹಾಗೂ ವಾರ್ಷಿಕ 466.94 ಕೋಟಿಗಳಾಗುತ್ತದೆ. ಐ.ಟಿ./ಜಿ.ಎಸ್.ಟಿ. ಪಾವತಿಸುವವರಿಗೆ ಸಹ ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರೆ ಎಂಬುದನ್ನು ಪರಿಶೀಲಿಸಿ ಸರ್ಕಾರ ತೀರ್ಮಾನಿಸಬೇಕೆಂದು ಕೋರುತ್ತೇನೆ. ಪ್ರತಿ ಗ್ರಾಮ ಅಥವಾ ನಗರ ಪ್ರದೇಶಗಳಲ್ಲಿ ವಾರ್ಡ್‌ವಾರು ಮರಣ ದಾಖಲೆಗಳನ್ನು ಕಡ್ಡಾಯವಾಗಿ ದಾಖಲಿಸಿ ಅದರಲ್ಲಿ ಫಲಾನುಭವಿಗಳ ವಿವರಗಳನ್ನು ಇಲಾಖೆಯೊಂದಿಗೆ ಹಂಚಿಕೊಳ್ಳುವಂತೆ ಸೂಚನೆ ನೀಡುವುದು. ಈಗಾಗಲೇ ಮರಣ ಹೊಂದಿರುವ ಫಲಾನುಭವಿಗಳಿಗೆ ಪಾವತಿಸಿರುವ ಮೊತ್ತವನ್ನು ಅವರ ಖಾತೆಯಿಂದ ಹಿಂಪಡೆಯುವಂತೆ ಬ್ಯಾಂಕ್‌ಗಳಿಂದ ನಿರ್ದೇಶನ ನೀಡಬೇಕೆಂದು ಅವರು ಕೋರಿದ್ದಾರೆ.

# ಭಾರತದ ಅಭಿವೃದ್ಧಿ ವಿಶ್ವ ಶಾಂತಿ ಸಮೃದ್ಧಿಯ ಸಂಕೇತ : ಮೋಹನ್ ಭಾಗವತ್

ನವದೆಹಲಿ: ಭಾರತವು ವಿಶ್ವಗುರುವಾಗಿ ಹೊರಹೊಮುವಾಗ ತನ್ನ ನಾಗರಿಕತೆಯ ಮೌಲ್ಯಗಳನ್ನು ಆಧಾರವಾಗಿಟ್ಟುಕೊಂಡು ವಿಶ್ವಕ್ಕೆ ಶಾಂತಿ ಮತ್ತು ಸಮೃದ್ಧಿಯನ್ನು ನೀಡುವ ದಿಕ್ಕಿನಲ್ಲಿ ಸಾಗಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್-ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ದೆಹಲಿ ನಗರದಲ್ಲಿ ಹೀರೋ ಎಂಟರ್‌ಪ್ರೈಸ್ ಆಯೋಜಿಸಿದ್ದ 18ನೇ ಬಿಎಂಎಲ್ ಮುಂಜಾಲ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಭಾಷಣ ಮಾಡಿದ ಅವರು, ಶ್ರಮದ ಘನತೆ, ಸಂಪತ್ತಿನ ಸಮಾನ ಹಂಚಿಕೆ, ನೈತಿಕ ಸಂಪತ್ತಿನ ಸೃಷ್ಟಿ ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ಯುವಜನರ ಪಾತ್ರದ ಮಹತ್ವವನ್ನು ಒತ್ತಿಹೇಳಿದರು. ಭಾರತವು ಕೇವಲ ಭೌಗೋಳಿಕ ಪ್ರದೇಶದ ಹೆಸರಲ್ಲ. ಇದು ಸಾವಿರಾರು ವರ್ಷಗಳ ನಾಗರಿಕತೆಯ ಅಸ್ತಿತ್ವವಾಗಿದೆ. ಅನೇಕ ಆಕ್ರಮಣಗಳು, ವಿದೇಶಿ ಆಳ್ವಿಕೆ ಹಾಗೂ ಐತಿಹಾಸಿಕ ಸವಾಲುಗಳನ್ನು ಎದುರಿಸಿ ಉಳಿದುಕೊಂಡಿರುವ ಶಾಶ್ವತ ಸಂಸ್ಕೃತಿ ಭಾರತದ್ದಾಗಿದೆ ಎಂದು ಅವರು ಹೇಳಿದರು.

ಗಂಗಾನದಿಯನ್ನು ಉದಾಹರಿಸಿ ಮಾತನಾಡಿದ ಭಾಗವತ್ ಗಂಗೆ ಸಾವಿರಾರು ವರ್ಷಗಳಿಂದ ಹರಿಯುತ್ತಿದೆ. ಅದು ಪುರಾತನವಾದರೂ ಅದರ ನೀರು ಸದಾ ಹೊಸದಾಗಿರುತ್ತದೆ. ಭಾರತವೂ ಶಾಶ್ವತ ಮತ್ತು ಸದಾ ನವೀಕೃತವಾಗಿರುವ ನಾಗ-ರಿಕತೆ ಎಂದರು.ಭಾರತದ ಬೆಳವಣಿಗೆಯಿಂದ ಕೇವಲ ದೇಶಕ್ಕಷ್ಟೇ ಅಲ್ಲ, ಇಡೀ ವಿಶ್ವಕ್ಕೂ ಪ್ರಯೋಜನವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು. ಭಾರತ ಉದಯಿಸಿದಾಗ ಕೇವಲ ಭಾರತಕ್ಕೆ ಮಾತ್ರ ಲಾಭವಾಗುವುದಿಲ್ಲ. ವಿಶ್ವದಾದ್ಯಂತ ಶಾಂತಿ ಮತ್ತು ಸಂತೋಷ ಹರಡುತ್ತದೆ. ವ್ಯಕ್ತಿಯ ಕಲ್ಯಾಣ, ರಾಷ್ಟ್ರದ ಅಭಿವೃದ್ಧಿ ಮತ್ತು ಮುಂದಿನ ಪೀಳಿಗೆಯ ಹಿತ ಈ ಮೂರೂ ಗುರಿಗಳು ಒಂದೇ ಪ್ರಯತ್ನದಲ್ಲಿ ಸಾಧನೆಯಾಗುತ್ತವೆ, ಎಂದು ಹೇಳಿದರು.

ಮುಂದಿನ 20ರಿಂದ 30 ವರ್ಷಗಳಲ್ಲಿ ಭಾರತವು ವಿಶ್ವದ ಅಗ್ರ ರಾಷ್ಟ್ರವಾಗಿ ಹೊರಹೊಮಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಅವರು, ಭಾರತ ವಿಶ್ವಗುರುವಾಗಲಿದೆ. ಅದು ಶಕ್ತಿಶಾಲಿಯಾಗಲಿದೆ. ಆದರೆ ಆ ಶಕ್ತಿಯನ್ನು ವಿಶ್ವದ ಕಲ್ಯಾಣಕ್ಕಾಗಿ ಬಳಸಲಿದೆ. ಮಾನವಕುಲಕ್ಕೆ ಮಾರ್ಗದರ್ಶಕವಾಗಲಿದೆ. ಇದೇ ನಮ್ಮ ದೃಷ್ಟಿಕೋನ, ಎಂದರು. ದೇಶದ ಯುವಜನರಲ್ಲಿ ಸೇವಾ ಮನೋಭಾವ, ದೇಶಭಕ್ತಿ ಮತ್ತು ಉತ್ತಮ ವ್ಯಕ್ತಿತ್ವದ ಮೌಲ್ಯಗಳನ್ನು ಬೆಳೆಸಬೇಕಾದ ಅಗತ್ಯವಿದೆ ಎಂದು ಅವರು ಹೇಳಿದರು. ನಾವು ಯುವಜನರನ್ನು ಕಠಿಣ ಪರಿಶ್ರಮ ಮತ್ತು ಸೇವೆಯ ಮನೋಭಾವದಿಂದ ಪ್ರೇರೇಪಿಸಬೇಕು. ಭಾರತದ ಬಲವರ್ಧನೆಗಾಗಿ ಅವರಲ್ಲಿ ಆಶಯವನ್ನು ಜಾಗೃತಗೊಳಿಸಬೇಕು. ನಮ್ಮ ಬದುಕಿನ ಮೂಲಕವೇ ಅವರಿಗೆ ದಾ-ರಿದೀಪವಾಗಬೇಕು, ಎಂದು ಹೇಳಿದರು.

ಪರಿಸರ ಹಾನಿ ಮತ್ತು ಅತಿಯಾದ ಉಪಭೋಗದಂತಹ ಜಾಗತಿಕ ಸಮಸ್ಯೆಗಳಿಗೆ ಭಾರತದಲ್ಲಿ ಪರಿಹಾರದ ವಿಚಾರಗಳಿವೆ ಎಂದು ಭಾಗವತ್ ಅಭಿಪ್ರಾಯಪಟ್ಟರು.ಭೂಮಿಯು ಮಾನವಕುಲವನ್ನು ಉಳಿಸಬಲ್ಲದು. ಆದರೆ ದುರಾಸೆ ಅಸಮತೋಲನವನ್ನು ಉಂಟುಮಾಡುತ್ತದೆ. ಅಮೆರಿಕದ ಜೀವನಮಟ್ಟವನ್ನು ಅತ್ಯುತ್ತಮವೆಂದು ಪರಿಗಣಿಸಲಾಗುತ್ತದೆ. ಆದರೆ 142 ಕೋಟಿ ಭಾರತೀಯರು ಅದೇ ಮಟ್ಟದಲ್ಲಿ ಸಂಪನ್ಮೂಲಗಳನ್ನು ಬಳಸಿದರೆ ಒಂದು ಭೂಮಿ ಸಾಕಾಗುವುದಿಲ್ಲ; ಆರು ಭೂಮಿಗಳು ಬೇಕಾಗುತ್ತವೆ, ಎಂದು ಅವರು ಎಚ್ಚರಿಸಿದರು. ಇತರ ರಾಷ್ಟ್ರಗಳನ್ನು ಕುರುಡಾಗಿ ಅನುಕ-ರಿಸಬಾರದು ಎಂದು ಹೇಳಿದ ಅವರು, ಭಾರತವು ಮಹಾಶಕ್ತಿಯಾಗಿ ಬೆಳೆದ ಬಳಿಕ ಅಮೆರಿಕ ಅಥವಾ ಇತರ ಬಲಿಷ್ಠ ರಾಷ್ಟ್ರಗಳಂತೆ ವರ್ತಿಸಿದರೆ ಅದು ಭಾರತವಾಗಿರುವುದಿಲ್ಲ. ಭಾರತ ಶಕ್ತಿಯುತವಾದಾಗ ವಿಶ್ವದಲ್ಲಿ ಶಾಂತಿ ಮತ್ತು ಸೌಹಾರ್ದ ಹೆಚ್ಚಾಗಬೇಕು, ಎಂದರು.

ಭಾರತ ಮತ್ತು ಅಮೆರಿಕದ ಸಂಬಂಧದ ಬಗ್ಗೆ ನಡೆದ ಸಂಭಾಷಣೆಯನ್ನು ಉಲ್ಲೇಖಿಸಿದ ಅವರು, ಒಬ್ಬ ವಿದೇಶಿ



ವ್ಯಕ್ತಿ ಭಾರತ ಮತ್ತು ಅಮೆರಿಕ ಸಹಜ ಮಿತ್ರರಾಗಬಹುದು ಎಂದರು. ಆರ್ಥಿಕ ಹಾಗೂ ರಕ್ಷಣಾ ಸಹಕಾರವೂ ಸಾಧ್ಯ ಎಂದರು. ಆದರೆ ಪ್ರತೀ ಬಾರಿ ಅವರು ಅಮೆರಿಕದ ಹಿತಾಸಕ್ತಿಗಳನ್ನು ಕಾಪಾಡುವ ಷರತ್ತು ವಿಧಿಸುತ್ತಿದ್ದರು ಎಂದು ಹೇಳಿದರು.

ನೆರೆಯ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧವು ಸ್ವಾರ್ಥದ ಮೇಲೆ ಅಲ್ಲ, ಕರ್ತವ್ಯ ಮತ್ತು ಮಾನವೀಯತೆಯ ಮೇಲೆ ಆಧಾರಿತವಾಗಿದೆ ಎಂದು ಅವರು ತಿಳಿಸಿದರು.ಮಾಲ್ಡೀವ್?ಸನಲ್ಲಿ ಕುಡಿಯುವ ನೀರಿನ ಬಿಕ್ಕಟ್ಟು ಎದುರಾದಾಗ ನೆರವಾದದ್ದು ಭಾರತವೇ ಹೊರತು ಚೀನಾ ಅಲ್ಲ. ಶ್ರೀಲಂಕಾ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದಾಗ ಸಹಾಯಕ್ಕೆ ಧಾವಿಸಿದ ದೇಶವೂ ಭಾರತವೇ, ಎಂದು ಹೇಳಿದರು.

ನಾವು ಇನ್ನೂ ದೊಡ್ಡ ಮಟ್ಟದ ನೆರವು ನೀಡುವಷ್ಟು ಶ್ರೀಮಂತರಾಗಿಲ್ಲ. ಆದ-ರೂ ನೆರೆಯ ರಾಷ್ಟ್ರ ಸಂಕಷ್ಟದಲ್ಲಿದ್ದರೆ ಸಹಾಯ ಮಾಡುವುದನ್ನು ಲೆಕ್ಕಾಚಾರ ಮಾಡುವುದಿಲ್ಲ. ಅದು ನಮ್ಮ ಸ್ವಭಾವ, ನಮ್ಮ ಧರ್ಮ, ಎಂದು ಅವರು ಹೇಳಿದರು.ವಿಶ್ವ ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಭಾರತದ ನಾಗರಿಕತೆಯ ಜ್ಞಾನದಲ್ಲಿ ಪರಿಹಾರ ಅಡಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಕೆಲವು ಸಮಸ್ಯೆಗಳಿಗೆ ಬೇರೆ ದೇಶಗಳು ಪರಿಹಾರ ಕಂಡುಕೊಂಡಿವೆ. ಆದರೆ ಕೆಲವು ಅಪೂರ್ಣ ಕಾರ್ಯಗಳನ್ನು ಪೂರ್ಣಗೊಳಿಸುವ ಸಾಮರ್ಥ್ಯ ಭಾರತಕ್ಕಷ್ಟೇ ಇದೆ, ಎಂದು ಹೇಳಿದರು.

ಸಂಪತ್ತು ಮತ್ತು ಅವಕಾಶಗಳು ಕೆಲವರ ಕೈಯಲ್ಲಿ ಕೇಂದ್ರೀಕೃತವಾಗದೆ ಸಮಾನವಾಗಿ ಹಂಚಿಕೆಯಾಗಬೇಕು ಎಂದು ಕರೆ ನೀಡಿದ ಅವರು, ಶ್ರಮಕ್ಕೆ ಗೌರವ ನೀಡುವ ಸಂಸ್ಕೃತಿ ಬೆಳೆಸಬೇಕೆಂದು ಒತ್ತಾಯಿಸಿದರು.

ಕಠಿಣ ಪರಿಶ್ರಮಕ್ಕೆ ಗೌರವ ಸಿಗಬೇಕು. ಶ್ರಮಕ್ಕೆ ಘನತೆ ದೊರಕಬೇಕು. ಪ್ರಾಮಾಣಿಕ ದುಡಿಮೆಗೆ ಮಾನ್ಯತೆ ಇರಬೇಕು. ಮುಂದಿನ ಪೀಳಿಗೆಗೆ ದುಡಿಯುವುದು ಹೆಮ್ಮೆಯ ವಿಷಯ ಎಂಬುದನ್ನು ಕಲಿಸಬೇಕು. ಶ್ರಮಕ್ಕೆ ಗೌರವ ನೀಡದೇ 140 ಕೋಟಿ ಜನರ ರಾಷ್ಟ್ರ ಸಮೃದ್ಧಿಯಾಗಲು ಸಾಧ್ಯವಿಲ್ಲ, ಎಂದು ಹೇಳಿದರು. ನೈತಿಕವಾಗಿ ಸಂಪತ್ತು ಸೃಷ್ಟಿಸುವುದು ಹಾಗೂ ಆದ-ಾಯವನ್ನು ಜವಾಬ್ದಾರಿಯಿಂದ ಬಳಸುವ ಅಗತ್ಯವನ್ನೂ ಅವರು ಒತ್ತಿಹೇಳಿದರು. ರಾಷ್ಟ್ರ ಪುನರ್‌ನಿರ್ಮಾಣದ ಕಾರ್ಯವನ್ನು ಯಾವುದೇ ಒಂದು ಸಂಘಟನೆ, ರಾಜಕೀಯ ಪಕ್ಷ ಅಥವಾ ವ್ಯಕ್ತಿ ಒಬ್ಬನೇ ಸಾಧಿಸಲು ಸಾಧ್ಯವಿಲ್ಲ. ಸಮೃದ್ಧ, ನೈತಿಕ ಹಾಗೂ ಪರಿಸರ ಸ್ನೇಹಿ ಭಾರತ ನಿರ್ಮಾಣಕ್ಕೆ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು, ಎಂದು ಭಾಗವತ್ ಕರೆ ನೀಡಿದರು.

# ನಾನಿದ್ದು ಪ್ರಯೋಜನವೇನು?



ಪ್ರಶಾಂತಭಟ್
ಕೋಟೇಶ್ವರ



ಹಿಂದೆ ಕಾಶ್ಯಪನೆಂಬ ಋಷಿಪುತ್ರನ ಮೇಲೆ ಐಶ್ವರ್ಯವಂತನೊಬ್ಬನ ರಥವು ಹರಿದು ಅವನನ್ನು ಬೀಳಿಸಿತು. ಆಗ ಅವನು ತುಂಬಾ ಸಂಕಟಪಡುತ್ತ, 'ಈ ಬಡ ಜೀವಿಯಿಂದ ಆಗಬೇಕಾದದ್ದೇನು? ನಾನು ಇಲ್ಲಿಯೇ ಸಾಯುತ್ತೇನೆ' ಎಂದು ಗೋಳಿಡುತ್ತ ಬಿದ್ದಿದ್ದನು.

ಆಗ ಇಂದ್ರನು ಒಂದು ನರಿಯ ರೂಪದಲ್ಲಿ ಬಂದು ಅವನಿಗೆ ಹೀಗೆ ಹೇಳಿದನು ? "ಅಯ್ಯಾ ಎಲ್ಲರೂ ಮನುಷ್ಯರಾಗಿ ಹುಟ್ಟಬೇಕೆನ್ನುತ್ತಾರೆ; ನೀನು ಮನುಷ್ಯ, ಋಷಿಪುತ್ರ, ಶ್ರೋತ್ರಿಯ; ಇಂಥ ಜನ್ಮವನ್ನು ಪಡೆದು ಸಾಯುತ್ತಾರೇನಯ್ಯಾ? ಏನಿದ್ದರೆ ಅದರಲ್ಲಿ ಅಭಿಮಾನ ಹುಟ್ಟುತ್ತದೆ ಎಂದು ಶ್ರುತಿ ಸಾರುತ್ತದೆ. ಹೀಗಿರುವಾಗ, ನೋಡಿದರೆ ಸಂತೋಷವಾಗುವ ನಿನ್ನ ರೂಪಿನಲ್ಲಿ ನಿನಗೆ ಅಭಿಮಾನವೇ ಇಲ್ಲವಲ್ಲ! ಆಹಾ ಹೀಗೆ ಕೈಗಳಿರುವವರು ಏನು ಪುಣ್ಯವಂತರು! ನಿನಗೆ ಹಣದ ಮೇಲೆ ಹೇಗೆ ಆಸೆಯೋ, ನಮಗೆ ಕೈಗಳ ಮೇಲೆ ಆಸೆ; ಕೈಗಳನ್ನು ಪಡೆಯುವುದಕ್ಕಿಂತ ಹೆಚ್ಚಿನ ಲಾಭವುಂಟೆ?

ನಮಗೆ ಕೈಗಳಿಲ್ಲದಿರುವುದರಿಂದಲೇ ನಾವು ಮುಳ್ಳು ಚುಚ್ಚಿಕೊಂಡರೆ ಅವುಗಳನ್ನು ತೆಗೆದುಕೊಳ್ಳಲಾರೆವು. ಋಷಿಪುತ್ರ! ಮೈಯನ್ನು ಕಡಿಯುವ ಪ್ರಾಣಿಗಳನ್ನು ಹೊಡೆದು ಓಡಿಸಲಾರೆವು. ಯಾರಿಗೆ ಕೈಗಳೂ, ದೇವರು ಕೊಟ್ಟ ಹತ್ತು ಬೆರಳುಗಳೂ ಇವೆಯೋ ಅವರು ಮೈಗೆ ಅಂಟಿದ ಕ್ರಿಮಿಗಳನ್ನು ಕಿತ್ತುಹಾಕಿಕೊಳ್ಳಬಹುದು. ಕಚ್ಚುವ ಹುಳು ಹುಪ್ಪಟೆಗಳನ್ನು ಉಜ್ಜಿಹಾಕಬಹುದು; ಚಳಿ ಮಳೆ ಬಿಸಿಲುಗಳಿಂದ ರಕ್ಷಣೆಗಳನ್ನು ಕಲ್ಪಿಸಿಕೊಳ್ಳಬಹುದು; ಬಟ್ಟೆ ಬರೆ ಊಟ ತಿಂಡಿ ಹಾಸಿಗೆ ಹೊದಿಕೆಗಳಿಂದ ಸುಖಪಡಬಹುದು; ದನಕರುಗಳನ್ನು ಇಟ್ಟುಕೊಂಡು ಹಾಲು ಕರೆದುಕೊಳ್ಳಬಹುದು. ಅಲ್ಪವಾದ ಪ್ರಾಣಿಗಳು ಬಾಯಿಲ್ಲದೆ ಕೈಯಿಲ್ಲದೆ ಕಿರುಕುಳಪಡುತ್ತವೆ. ನೀನು ಅಂಥವನೇ? ಪುಣ್ಯದಿಂದ ನೀನು ನರಿಯಲ್ಲ, ಕ್ರಿಮಿಯಲ್ಲ, ಇಲಿಯಲ್ಲ, ಹಾವಲ್ಲ, ಕಪ್ಪೆಯಲ್ಲ. ಅಂಥ ಯಾವ ಜನ್ಮದಲ್ಲಿಯೂ ಹುಟ್ಟಿಲ್ಲ. ಇಷ್ಟರಮಟ್ಟಿಗೆ ಇದೆಯಲ್ಲಾ ಎಂದೇ ಸಂತೋಷಪಟ್ಟುಕೊಳ್ಳಬೇಕಾದದ್ದು ನ್ಯಾಯ.

ಕಾಶ್ಯಪ! ಈ ಚಿಗಟ ನನ್ನನ್ನು ಕಿತ್ತು ತಿನ್ನುತ್ತದೆ, ಕೈಯಿಲ್ಲದ್ದರಿಂದ ಅದನ್ನು ಕಿತ್ತುಹಾಕಲಾರೆ. ನನ್ನ ಅವಸ್ಥೆ ಹೀಗೆ! ಸತ್ತು ಈ ಸಂಕಟದಿಂದ ಪಾರಾಗೋಣವೆಂದರೆ, ನರಿಯ ಜನ್ಮಕ್ಕಿಂತಲೂ ಇನ್ನೂ ಕೀಳುಜನ್ಮವೆಲ್ಲಿ ಬಂದೀತೋ ಎಂದು ಪಾಪಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೂಳ್ಳಲು ಮನಸ್ಸು ಕೊಡಲಾರೆ. ಕೆಲವರು ಸುಖದಲ್ಲಿಯೇ ಹುಟ್ಟುತ್ತಾರೆ; ಆದರೆ ಸುಖವೇ ಕೊನೆಯವರೆಗೆ ಇರುವುದಿಲ್ಲ. ಸುಖಕ್ಕೆ ಕೊನೆಯೆಲ್ಲಿ? ಮನುಷ್ಯ ಐಶ್ವರ್ಯವಂತನಾದರೆ ಆಮೇಲೆ ರಾಜನಾಗಬೇಕೆನ್ನುತ್ತಾನೆ. ರಾಜನಾದರೆ ದೇವತೆಯಾಗಬೇಕೆನ್ನುತ್ತಾನೆ; ದೇವತೆಯಾದರೆ ದೇವೇಂದ್ರನಾಗಬೇಕೆನ್ನುತ್ತಾನೆ. ಅಲ್ಲಿಗೂ ತೃಪ್ತಿ ಬರುವುದಿಲ್ಲ. ಇಷ್ಟಪಟ್ಟದ್ದು ದೊರಕಿದರೆ ಆಶೆ ಶಾಂತವಾಗುತ್ತದೆಯೇ? ಸೌದೆ ಉರಿದಷ್ಟೂ ಬೆಂಕಿ ಉರಿಯುವುದು ಹೆಚ್ಚಾಗುತ್ತದೆ. ನೀನೇನೋ ದುಃಖದಲ್ಲಿದ್ದೀಯೆ; ಆದರೆ ನಿನಗೆ ಸುಖವೂ ಇದೆ; ಎರಡೂ ಇರುವಾಗ ಏಕೆ ಕೊರಗಬೇಕು?

ಎಷ್ಟೋ ಜನಗಳಿಗೆ ಕೈ ಇಲ್ಲ; ಇದ್ದು ಇಲ್ಲದೆಹೋಗಿರುವುದೂ ಉಂಟು; ನಾನಾರೋಗಗಳಿರುವುದುಂಟು; ನಿನಗೆ ಯಾವ ಅಂಗವೂ ಊನವಿಲ್ಲ; ಆರೋಗ್ಯದಿಂದಿದ್ದೀಯೆ; ಲೋಕದಲ್ಲಿ ಮರ್ಯಾದೆಯಿದೆ. ಆದ್ದರಿಂದ ಎದ್ದು ನಿನ್ನ ಧರ್ಮವನ್ನು ನೀನು ಆಚರಿಸು. ಯಾರೊಡನೆಯೂ ಸ್ಪರ್ಧೆ ಬೇಡ; ನಾನು ಹಿಂದಿನ ಜನ್ಮದಲ್ಲಿ ತರ್ಕಪಂಡಿತನಾಗಿದ್ದು ನಾಸ್ತಿಕನಾಗಿ ಅತಿ ಮಾತಿನವನಾಗಿ ಎಲ್ಲವನ್ನೂ ಶಂಕಿಸುತ್ತಾ ಮೂರ್ಖನಾಗಿದ್ದೆ; ಅದರ ಫಲ ಈ ನರಿಯ ಜನ್ಮ. ಮತ್ತೆಂದಾದರೂ ನನಗೆ ಮನುಷ್ಯ ಜನ್ಮ ಬಂದಿತೆಂದರೆ ಖಂಡಿತವಾಗಿ ಯಜ್ಞ, ದಾನ ತಪಸ್ಸುಗಳಲ್ಲಿ ನಿರತನಾಗಿರುತ್ತ ತಿಳಿಯಬೇಕಾದದ್ದನ್ನು ತಿಳಿದು, ಬಿಡಬೇಕಾದದ್ದನ್ನು ಬಿಟ್ಟು ಇರುತ್ತೇನೆ!"


ಕಾಶ್ಯಪನಿಗೆ ಆಶ್ಚರ್ಯವಾಯಿತು. "ಈ ನರಿಗೆ ಇಷ್ಟು ಬುದ್ಧಿಯೇ? ಇಷ್ಟು ಕೌಶಲ್ಯವೆ?" ಎಂದು ಜ್ಞಾನದೃಷ್ಟಿಯಿಂದ ನೋಡಲು ಅದು ಇಂದ್ರನೆಂದು ಗೊತ್ತಾಯಿತು. ಕೂಡಲೆ ಎದ್ದು ಅವನಿಗೆ ಗೌರವ ತೋರಿಸಿ, ಅವನ ಅನುಮತಿಯಿಂದ ಮನೆಗೆ ಹೋದನು. ಪ್ರತಿನಿತ್ಯ ಜನ ನಿರಾಶಾವಾದದಲ್ಲಿ ಮಾತನಾಡುವುದನ್ನೂ, ಅತ್ಯಂತ ಬುದ್ಧಿವಂತ ಜನರೂ ಆತ್ಮಘಾತುಕವಾದ ಅಂತ್ಯಗಳಿಗೆ ತಲುಪುವುದನ್ನೂ ಪ್ರತಿನಿತ್ಯ ಕೇಳುತ್ತಿರುತ್ತೇವೆ. ನಾವೇ ಒಮ್ಮೊಮ್ಮೆ ಏನು ಬದುಕೋ ಇದು ಎಂದು ಬೇಸರಿಸಿಕ್ಕೊಳ್ಳುತ್ತಿರುತ್ತೇವೆ. ಅದಕ್ಕೆ ಈ ಕಥೆಯಲ್ಲಿ ಒಬ್ಬ ಶ್ರೀಮಂತನ ರಥ ಎಗ್ಗಿಲ್ಲದೆ ಒಬ್ಬ ಬಡವನನ್ನು ತಳ್ಳಿಹೋಗುವಂತೆ, ಅನೇಕ ರೀತಿಯ ದುಷ್ಟಪ್ರವೃತ್ತಿಗಳು ಕೂಡಾ ಕಾರಣವಾಗಿ ಗೋಚರಿಸಬಹುದು. ಈ ಎಲ್ಲ ನಿಟ್ಟಿನಲ್ಲಿ ಈ ಕಥೆ ಸಂವೇದಿಸಿದ ಹಾಗೆನಿಸಿತು.

ಹಾಗೆಯೇ ಈ ಕಥೆಯಲ್ಲಿ ಯಜ್ಞ, ದಾನ, ತಪಸ್ಸು ಇತ್ಯಾದಿಗಳ ಬಗ್ಗೆ ಮಾತು ಬರುತ್ತದೆ. ಈ ಕುರಿತು ಒಂದಕ್ಷಣ ಚಿಂತಿಸಿದಾಗ, ಇದಕ್ಕೆ ಭಗವದ್ಗೀತೆ ಹಾಗೂ ನಮ್ಮ ಪೌರಾಣಿಕ ಹಿನ್ನಲೆಗಳಲ್ಲಿ ಸರ್ವಕಾಲಕ್ಕೆ ಸೂಕ್ತವಾಗುವಂತಹ ವಿವರಣೆಗಳಿವೆ ಎಂಬುದು ವೇದ್ಯವಾಗುತ್ತದೆ. "ಅತಿಯಾದ ಫಲಾಪೇಕ್ಷೆಯಿಲ್ಲದೆ ಉತ್ತಮ ಮನಸ್ಸಿನಿಂದ ಭಗವಂತನಿಗೆ ಅರ್ಪಿತವಾಗುವ ಕಾರ್ಯವೆಲ್ಲವೂ ಯಜ್ಞ" ಎಂಬ ಭಾವದ ಶ್ಲೋಕಗಳು ಭಗವದ್ಗೀತೆಯಲ್ಲಿವೆ. ದಾನ ಎಂದರೆ ಯಾವುದೇ ರೀತಿಯ ಉತ್ತಮ ಸಹಾಯವಾಗಬಹುದಲ್ಲವೆ?. ತಪಸ್ಸು ಎಂದರೆ ಉಚ್ಚ ಧ್ಯೇಯಗಳ ಕಡೆಗೆ ಮನಸ್ಸು ಮಾಡಿ ನಮ್ಮ ಬದುಕಿನ ಯಾತ್ರೆಯನ್ನು ಸಾಗಿಸುವುದೂ ಎಂದು ಕೂಡಾ ಅರ್ಥೈಸಬಹುದು.

ಅಂದ ಹಾಗೆ ಈ ಎಲ್ಲ ಒಳ್ಳೆಯದರಿಂದ ನಮಗೆ ಒಳ್ಳೆಯದಾಗುತ್ತದೆ ಎಂಬ ಖಾತ್ರಿಯಿದೆಯೇ? ಎಂಬ ಪ್ರಶ್ನೆ ನಮ್ಮ ದಿನನಿತ್ಯದ ಬದುಕಿನಲ್ಲಿ ಸರ್ವೇಸಾಮಾನ್ಯವಾಗಿ ಎದುರಾಗುವುದುಂಟು! ಈ ಕಥೆಯನ್ನು ಮಹಾಭಾರತದ ಶಾಂತಿಪರ್ವದಲ್ಲಿ ಭೀಷ್ಮರು ಯುದಿಷ್ಠಿರನಿಗೆ ಹೇಳಿದ್ದು. ಯುದಿಷ್ಠಿರ ನಿತ್ಯ ಒಳ್ಳೆಯ ಕೆಲಸ ಮಾಡುವ ಮನಸ್ಸು ಹೊಂದಿದ್ದು ಧರ್ಮ ಮಾರ್ಗದಲ್ಲಿಯೇ ನಡೆದವನಾದರೂ, ಆತನಲ್ಲೂ ಪ್ರತೀಕ್ಷಣದ ಅನ್ಯಾಯದ ಬದುಕು, ಹಿಂಸೆ, ಹಾಗೂ ಗೋಚರಿತಗೊಂಡ ದುಃಖದ ಫಲಿತಾಂಶ ಇವೆಲ್ಲಾ ನೋಡಿ ಮನಸ್ಸು ಸಂದಿಗ್ಧಕ್ಕೆ ಒಳಾಗಾಗಿ ಈ ಸಂದೇಹ ಹುಟ್ಟಿರಬೇಕು. ಆತ ಭೀಷ್ಮರನ್ನು ಪ್ರಶ್ನಿಸಿದ "ತಾತಾ, ಈ ಯಜ್ಞ, ದಾನ ತಪಸ್ಸು, ಗುರುಶುಶ್ರೂಷೆ ಇವುಗಳಿಗೆ ಫಲವುಂಟೆ?"

ಅದಕ್ಕೆ ಭೀಷ್ಮರು ನುಡಿದರು: ಶ್ರದ್ಧಾಭಕ್ತಿಯುಳ್ಳವರೂ ದಾಂತರೂ ಸಾತ್ವಿಕರೂ ಆಗಿ, ಸತ್ಕರ್ಮಗಳನ್ನು ಆಚರಿಸಿದರೆ ಅವರು ಒಂದು ಶುಭದಿಂದ ಇನ್ನೊಂದು ಶುಭಕ್ಕೂ ಒಂದು ಸುಖದಿಂದ ಇನ್ನೊಂದು ಸುಖಕ್ಕೂ ಒಂದು ಸ್ವರ್ಗದಿಂದ ಇನ್ನೊಂದು ಸ್ವರ್ಗಕ್ಕೂ ಹೋಗುವರು. ಕರ್ಮವು ಮನುಷ್ಯನನ್ನು ಅವನ ನೆರಳಿನಂತೆ ಎಡಬಿಡದೆ ಅನುಸರಿಸುತ್ತಾ, ಎದ್ದರೆ ಏಳುತ್ತ, ಕೂತರೆ ಕೂರುತ್ತ, ಓಡಿದರೆ ಓಡುತ್ತಾ, ಮಲಗಿದರೆ ಮಲಗುತ್ತಾ ಇರುತ್ತದೆ. ಅದರ ಕಾಲ ಬಂದಾಗ ಯಾರ ಪ್ರೇರಣೆಯೂ ಇಲ್ಲದೆ ಮರಗಳು ಹೂವು ಹಣ್ಣುಗಳನ್ನು ಬಿಡುವಂತೆ ಫಲ ಕೊಡುತ್ತದೆ. ಸಾವಿರ ಹಸುಗಳಿದ್ದರೂ ಒಂದು ಕರು ತನ್ನ ತಾಯನ್ನು ಗುರುತಿಸುವಂತೆ ಅವನವನ ಕರ್ಮ ಅವನನ್ನು ಬೆಂಬಿಡದೆ ಹಿಡಿಯುತ್ತದೆ; ಬಟ್ಟೆ ಒಗೆದರೆ ಕೊಳೆ ಹೋಗುವಂತೆ ಸತ್ಕರ್ಮಗಳಿಂದ ಪಾಪ ತೊಳೆದು ಇಷ್ಟಾರ್ಥಗಳು ಸಿದ್ಧಿಸುತ್ತವೆ.

# ಬದುಕು ಬದಲಿಸುವ ಕರುಣೆಯ ಭಾವ




ನೀವು ಮಾಡುವ ಅತ್ಯಂತ ಚಿಕ್ಕ ಸಹಾಯ ಕೂಡ ಕೆಲವೊಬ್ಬರ ಬದುಕನ್ನು ಸಂಪೂರ್ಣವಾಗಿ ಬದಲಿಸಬಹುದು ಎಂಬುದಕ್ಕೆ ಪುಟ್ಟ ಉದಾಹರಣೆ ಕೆಳಗಿನ ಕಥೆ.

24 ವರ್ಷದ ವಯೋವೃದ್ಧರು ತಮ್ಮ ಹರಿದ ಚಪ್ಪಲಿಗಳನ್ನು ಎಳೆಯುತ್ತಾ ತಮ್ಮ ಶರಟಿನ ಕಾಲರ್ ಬಳಿ ಮಾಸಿಹೋದ ಭಾಗವನ್ನು ತಮ್ಮ ಹಿಂದಿನ ಕೂದಲಿನಿಂದ ಮುಚ್ಚುವಂತೆ ಮಾಡುತ್ತಾ ಕೆಲಸದ ಹುಡುಕಾಟದಲ್ಲಿ ಅಲ್ಲಿಗೆ ಬಂದು ನಿಂತರು. ಅತ್ಯಂತ ಪ್ರಖರವಾದ ಆ ಕಚೇರಿಯ ಬೆಳಕಿನಲ್ಲಿ ಅವರ ಅಸಹಾಯಕತೆ ಕಣ್ಣಿಗೆ ಎದ್ದು ಕಾಣುತ್ತಿತ್ತು.

ನಿಧಾನವಾಗಿ ಅವರು ಅಲ್ಲಿದ್ದ ಹೆಲ್ಪ್ ಡೆಸ್ಕ್ ನ ಬಳಿ ತೆರಳಿ ಅಲ್ಲಿ ಕುಳಿತಿದ್ದ ಯುವತಿಗೆ ಕಳೆದ ವರ್ಷ ತನ್ನ ಪತ್ನಿ ತೀರಿ ಹೋಗಿದ್ದು ಆಕೆಯ ಖಾಯಿಲೆಗೆ ತಮ್ಮ ಉಳಿತಾಯದ ಬಹುಪಾಲು ಹಣ ಖರ್ಚಾಗಿ ಹೋಗಿದ್ದು ಇದೀಗ ತಮ್ಮ ಬಳಿ ಒಂದೇ ಒಂದು ರೂಪಾಯಿಯೂ ಇಲ್ಲ. ಮಕ್ಕಳು ಇಲ್ಲದ ತಮಗೆ  ಒಂದು ಕೋಣೆಯ ಪುಟ್ಟ ಮನೆಯಿದ್ದು ಸರ್ಕಾರ ಕೊಡುವ ರೇಷನ್ ನಿಂದ ಬದುಕು ಸಾಗಿಸಬಹುದು ಆದರೆ ಕರೆಂಟ್ ಬಿಲ್ಲು, ದಿನಸಿ ಸಾಮಾನುಗಳು ಔಷಧಿ ಖರ್ಚುಗಳ ವೆಚ್ಚವನ್ನು ಧರಿಸಲು ತಾನು ದುಡಿಯಲೇಬೇಕಾದ ಅನಿವಾರ್ಯತೆ ತಮಗಿದೆ. ಬದುಕಿರುವವರೆಗೂ ಸ್ವಾಭಿಮಾನದಿಂದ ದುಡಿದು ತಿನ್ನಬೇಕು ಎಂಬ ಆಶಯದಿಂದ ತಾವು ಕೆಲಸ ಹುಡುಕಿಕೊಂಡು ಬಂದಿರುವೆ ಎಂದು ಒಂದೇ ಉಸಿರಿನಲ್ಲಿ ಹೇಳಿ ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ಆರೋಗ್ಯಕರ ದೇಹವನ್ನು ಹೊಂದಿದ್ದ ಆತ ಕೆಲವೇ ದಿನಗಳಲ್ಲಿ ಇಳಿದು ಹೋಗಿರಬಹುದು ಎಂಬುದನ್ನು ಆತನ ಮುಖಲಕ್ಷಣ ಹಾಗೂ ದೇಹದ ಗಾತ್ರದಿಂದ ಅರಿತ ಆಕೆ ಸಹಾನುಭೂತಿಯಿಂದ ಆತನತ್ತ ನೋಡಿದಳು. ಇರುವಷ್ಟು ಕಾಲ ಸ್ವತಂತ್ರವಾಗಿ ದುಡಿದು ತಿನ್ನಬೇಕು ಎಂಬ ಆತನ ಆಶಯ ಆಕೆಯ ಮೆಚ್ಚುಗೆಗೆ ಪಾತ್ರವಾಯಿತು.

ಇದೀಗ ರಾತ್ರಿ ಪಾಳಿಯಲ್ಲಿ ಸಾಮಾನುಗಳನ್ನು ಹೊತ್ತು ಬರುವ ಟ್ರಕ್ ಗಳಿಂದ ಸಾಮಾನುಗಳನ್ನು ಇಳಿಸಿಕೊಳ್ಳುವ ಕೆಲಸ ಖಾಲಿ ಇದ್ದು ತಡ ರಾತ್ರಿಯಿಂದ ಮುಂಜಾನೆಯವರೆಗೆ ಈ ಕೆಲಸವನ್ನು ಮಾಡಲು ಅರ್ಜಿ ಕರೆಯಲಾಗಿತ್ತು. ತನ್ನ ಬದುಕನ್ನು ಸಾಗಿಸಲು ಈ ಕೆಲಸ ಅನಿವಾರ್ಯವಾಗಿದ್ದು, ಸಿಟಿ ಬಸ್ಸಿಗೆ ಕೊಡಲು ತಮ್ಮಲ್ಲಿ ಹಣವಿಲ್ಲವಾದ ಕಾರಣ ಸುಮಾರು 5 ಕಿ.ಮೀ ದೂರದಿಂದ ತಾನು ನಡೆದುಕೊಂಡು ಬಂದಿರುವುದಾಗಿ ಆತ ಹೇಳಿದರು.

ವೃದ್ಧನ ಅಸಹಾಯಕತೆಯನ್ನು ಕಂಡ ಆಕೆ ಈಗಾಗಲೇ ಕಣ್ಣಲ್ಲಿ ತುಸು ನೀರನ್ನು ತುಂಬಿಕೊಂಡಿದ್ದಳು. ಅಪಾರ ದೈಹಿಕ ಶ್ರಮವನ್ನು ಬಯಸುವ ಆ ಕೆಲಸವನ್ನು ಮಾಡುವುದು ವಯಸ್ಸಾದ ಆತನಿಗೆ ಸಾಧ್ಯವಿಲ್ಲ ಎಂಬ ಕಾರಣಕ್ಕೆ ಆಕೆ ಅತ್ಯಂತ ಮೆಲುವಾಗಿ ಆತನನ್ನು ಕೆಲಸಕ್ಕೆ ತೆಗೆದುಕೊಳ್ಳಲು ಆಗುವುದಿಲ್ಲ ಎಂಬುದನ್ನು ತಿಳಿಸಿ ಹೇಳಿದಳು. ತೀವ್ರ ನಿರಾಶೆಯಿಂದ ಹಿಂದಕ್ಕೆ ಒರಗಿ ಕುಳಿತ ವೃದ್ಧ ವ್ಯಕ್ತಿ ಮುಂದಿನ ಒಂದೆರಡು ನಿಮಿಷಗಳಲ್ಲಿ ನಿಧಾನವಾಗಿ ಎದ್ದು ನಿಂತು ಹೊರಗೆ ಹೋಗಲು ಅನುವಾದ. ಆತನ ದಣಿದ ಕಾಲುಗಳಲ್ಲಿ ನಿಶ್ಯಕ್ತಿ, ಮುಖದಲ್ಲಿನ ನಿರಾಶೆಯ ಭಾವ ಕಂಡು ಆಕೆಯ ಮನಸ್ಸಾ ಹಿಂಡಿದಂತಾಯಿತು.

ಕೂಡಲೇ ಆತನನ್ನು ಕೂಗಿ ಕರೆದ ಆಕೆಯ ಧ್ವನಿಯಲ್ಲಿನ ಉತ್ಸಾಹವನ್ನು ನೋಡಿ ಕೊಂಚಮಟ್ಟಿನ ಆಶಾಭಾವದಿಂದ ಮರಳಿ ಬಂದ ಆತನನ್ನು ಕುರಿತು ಆ ಹೆಣ್ಣು ಮಗಳು ನಮ್ಮ ಕಚೇರಿಯ ಮುಖ್ಯ ಭಾಗದಲ್ಲಿರುವ ಹೆಲ್ಪ್ ಡೆಸ್ಕ್ ನಲ್ಲಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿ ಒಂದೆರಡು ದಿನಗಳ ಹಿಂದೆ ಕೆಲಸ ಬಿಟ್ಟು ಹೋಗಿದ್ದಾನೆ. ತಮ್ಮ ಸಂಸ್ಥೆಯು ನಂಬಿಕೆಗೆ ಅರ್ಹವಾದ ವ್ಯಕ್ತಿಯ ಹುಡುಕಾಟದಲ್ಲಿದ್ದು ಬರುವ ಫೋನ್ ಕರೆಗಳಿಗೆ ಉತ್ತರಿಸುವ ದಾಖಲೆಗಳನ್ನು ಹೊಂದಿಸಿಡುವ ಹಾಗೂ ಬಂದಿಳಿವ ಹಾಗೂ ಹೊರಗೆ ಕಳುಹಿಸುವ ಮಾಲುಗಳ ಮಾಹಿತಿಯನ್ನು ಬರೆದಿಡುವ ಕೆಲಸಕ್ಕೆ ವ್ಯಕ್ತಿ ಬೇಕಾಗಿದ್ದಾನೆ. ಇದು ಸುಲಭದ ಕೆಲಸವಾಗಿದ್ದು ಒಳಾಂಗಣದಲ್ಲಿ ಕುಳಿತುಕೊಂಡು ಮಾಡಬಹುದಾಗಿದೆ... ಅಲ್ಲದೆ ಈ ಕೆಲಸಕ್ಕೆ ವೇರ್ ಹೌಸ್ ನ ಕೆಲಸಕ್ಕಿಂತ ತುಸು ಸಂಬಳ ಹೆಚ್ಚು.... ನೀವು ಇದನ್ನು ಮಾಡಲು ಒಪ್ಪುವಿರಾದರೆ ಎಂದು ಆಕೆ ಕೇಳುತ್ತಿದ್ದಂತೆಯೇ ನೆಮ್ಮದಿಯ ಮುಖಭಾವದಿಂದ ಮಾಡುತ್ತೇನೆ ಎಂಬಂತೆ ತಲೆಯಾಡಿಸಿದ ವೃದ್ಧ.

ಆ ಹೊತ್ತಿಗೆ ಆಕೆಯ ಶಿಫ್ಟ್ ಮುಗಿದಿದ್ದು ವೃದ್ಧನನ್ನು ತನ್ನೊಂದಿಗೆ ಕರೆದೊಯ್ದು ಅಲ್ಲಿಯೇ ಪಕ್ಕದ ಹೊಟೆಲಿನಲ್ಲಿ ಹೊಟ್ಟೆ ತುಂಬಾ ಊಟ ಮಾಡಿಸಿ ನಂತರ ಚಪ್ಪಲಿ ಅಂಗಡಿಗೆ ಕರೆದೊಯ್ದು ಒಂದು ಜೊತೆ ಮೆದುವಾದ ಆರಾಮದಾಯಕವಾದ ಚಪ್ಪಲಿಯನ್ನು ಕೊಡಿಸಿದಳಲ್ಲದೇ ಚಳಿಯಲ್ಲಿ ನಡುಗುತ್ತಿದ್ದ ಆತನಿಗೆ ಒಂದು ಸ್ವೆಟರ್ ಹಾಗೂ ಛತ್ರಿಯನ್ನು ಕೂಡ ಖರೀದಿಸಿ ಕೊಟ್ಟಳು. ತನ್ನ ಮೊಮ್ಮಗಳ ವಯಸ್ಸಿನ ಪುಟ್ಟ ಯುವತಿಯ ಮೊಗದಲ್ಲಿದ್ದ ದಯಾ ಭಾವವನ್ನು ಕಂಡು ಕೊಂಚ  ಭರವಸೆ ಮೂಡಿತು.

ಕೊನೆಗೆ ಓರ್ವ ಪುಟ್ಟ ಯುವತಿಗಾದರೂ ತನ್ನ ಹೀನಾಯ ಪರಿಸ್ಥಿತಿಯ ಅರಿವಾಗಿ ಸಹಾಯ ಹಸ್ತ ಚಾಚಿದಳಲ್ಲ ಎಂದು ವೃದ್ಧನ ಕಣ್ಣು ತುಂಬಿ ಬಂತು.. ಮರುದಿನದಿಂದಲೇ ಆತ ಅಲ್ಲಿ ಕೆಲಸಕ್ಕೆ ಸೇರಿಕೊಂಡು ನಿಷ್ಠೆಯಿಂದ ಕಾರ್ಯನಿರ್ವಹಿಸಲು ಆರಂಭಿಸಿದ.

ಅವಶ್ಯಕತೆ ಇರುವವರಿಗೆ ಸಹಾಯ ಮಾಡುವುದು ಖಂಡಿತವಾಗಿಯೂ ದಾನವಲ್ಲ... ಅವರಿಗೆ ಅವರ ಕಳೆದು ಹೋದ ಗೌರವ ಘನತೆ ಮತ್ತು ಅವಕಾಶಗಳನ್ನು ಮರಳಿ ದೊರಕಿಸಿ ಕೊಡುವುದು. ಅವರ ಕಷ್ಟಗಳನ್ನು ಕೇಳುವವರು ಇನ್ನೂ ಇದ್ದಾರೆ ಎಂಬ ಭರವಸೆಯನ್ನು ಮೂಡಿಸುವುದು ಅವಶ್ಯಕ

ಅತ್ಯಂತ ವೇಗವಾಗಿ ಸಾಗುತ್ತಿರುವ ಈ ಜಗತ್ತಿನಲ್ಲಿ ಮುಂದೆ ಓಡುತ್ತಿರುವ ಸಮಯದಲ್ಲಿ ಇಂತಹದೊಂದು ಜಗತ್ತಿನ ನಿರ್ಮಾಣಕ್ಕೆ ಕಾರಣೀಭೂತರಾದ ಆದರೆ ಇದೀಗ ವಯೋಸಹಜ ತೊಂದರೆಗಳ ಕಾರಣಕ್ಕೆ ನಿರ್ಲಕ್ಷಿಸಲ್ಪಟ್ಟಿರುವ ಜನರನ್ನು ಮರೆಯದೆ... ಅವರಿಗೂ ಒಂದು ಅವಕಾಶವನ್ನು ಕೊಡಬೇಕು... ಆ ಮೂಲಕ ಮಾನವೀಯತೆಯನ್ನು ಮೆರೆಯಬೇಕು. ನಮ್ಮನ್ನು ಈ ಜಗತ್ತು ಮರೆತು ಮುಂದೆ ಸಾಗಿದೆ ಎಂದು ಭಾವಿಸಿ ನೋಯುವ ಜನರಿಗೆ ನಮ್ಮ ಪ್ರೀತಿಯ, ಕರುಣೆಯ ಒಂದು ಎಳೆ ಬದುಕಿನ ಕುರಿತು ಹೊಸ ಭರವಸೆಯನ್ನು ಹುಟ್ಟಿಸುತ್ತದೆ. ಏನಂತೀರಾ ಸ್ನೇಹಿತರೇ?



ವೀಣಾ ಹೇಮಂತ್
ಗೌಡ ಪಾಟೀಲ್

1ನೇ ಪುಟದಿಂದ....

## ಸ್ವಚ್ಛತೆ ದೇವರಿಗೆ ಸಮ ; ಘನ ತ್ಯಾಜ್ಯ ನಿರ್ವಹಣೆಯಲ್ಲಿ ಎಲ್ಲರೂ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು : ಜಿಲ್ಲಾಧಿಕಾರಿ

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಡಾ. ನಂದಾ ಹಣಬರಟ್ಟಿ ಮಾತನಾಡಿ, ಪೌರಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರ ವಿವಿಧ ಸೌಲಭ್ಯಗಳನ್ನು ಜಾರಿಗೊಳಿಸಿದೆ ಎಂದು ತಿಳಿಸಿದರು. ಪೌರಕಾರ್ಮಿಕರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕುವಂತೆ ವಿಶೇಷ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ವಸತಿಯುತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ( ಖಛಿಥಿಂಟ- ಚಿಢುಖಿ ) ಹಾಗೂ ಪ್ರೋತ್ಸಾಹ ಧನ ( ಕಡುದಜ ಟಂಟಿಜಥಿ ) ನೀಡುವ ಮೂಲಕ ಉನ್ನತ ಶಿಕ್ಷಣಕ್ಕೆ ಉತ್ತೇಜನ ನೀಡಲಾಗುತ್ತಿದೆ ಎಂದು ಹೇಳಿದರು. ಪೌರಕಾರ್ಮಿಕರು ದಿನನಿತ್ಯ ವಿರಾಮವಿಲ್ಲದೆ ಸಾರ್ವಜನಿಕರ ಆರೋಗ್ಯ ರಕ್ಷಣೆಗೆ ಶ್ರಮಿಸುತ್ತಿದ್ದಾರೆ. ಅವರ ಆರೋಗ್ಯದ ಬಗ್ಗೆ ಸರ್ಕಾರ ವಿಶೇಷ ಕಾಳಜಿ ವಹಿಸಿದ್ದು, ನಿಯಮಿತ ಆರೋಗ್ಯ ತಪಾಸಣೆ, ಅಗತ್ಯ ಚಿಕಿತ್ಸಾ ಸೌಲಭ್ಯ ಹಾಗೂ ಸುರಕ್ಷತಾ ಪರಿಕರಗಳನ್ನು ಒದಗಿಸಲಾಗುತ್ತಿದೆ. ಕಾರ್ಮಿಕರು ಈ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ತಮ್ಮ ಸುರಕ್ಷತೆಗೆ ಹೆಚ್ಚಿನ ಗಮನ ನೀಡಬೇಕು ಎಂದು ಸಲಹೆ ನೀಡಿದರು. ನಿಮ್ಮ ಆರೋಗ್ಯದ ಜೊತೆಗೆ ಸಮಾಜದ ಆರೋಗ್ಯ ರಕ್ಷಣೆಯ ಜವಾಬ್ದಾರಿಯೂ ನಮ್ಮೆಲ್ಲರ ಮೇಲಿದೆ. ಸ್ವಚ್ಛತೆ ಮತ್ತು ಆರೋಗ್ಯಕರ ಪರಿಸರ ನಿರ್ಮಾಣದಲ್ಲಿ ಎಲ್ಲರೂ ಕೈಜೋಡಿಸಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸೋಣ ಎಂದು ಅವರು ಕರೆ ನೀಡಿದರು. ಸಪಾಯಿ ಕರ್ಮಚಾರಿ ಸಂಘದ ನಾಮನಿರ್ದೇಶಿತ ಸದಸ್ಯ ಎಸ್. ಎನ್. ಬಳ್ಳಾರಿ ಮಾತನಾಡಿ ಸಮಾಜದಲ್ಲಿ ತಲೆ ಎತ್ತಿ ಬಾಳುವಂತೆ ಮಾಡಿದ ಮಹಾತ್ಮರ ಆಶಯದಂತೆ ಪೌರಕಾರ್ಮಿಕರ ಬದುಕಿಗೆ ಭದ್ರತೆ ಹಾಗೂ ಸ್ವಾಭಿಮಾನವನ್ನು ತಂದುಕೊಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ" ಎಂದು ತಿಳಿಸಿದರು. ಪೌರಕಾರ್ಮಿಕರಿಗೆ ಕಾಲಕಾಲಕ್ಕೆ ಸರಿಯಾಗಿ ವೇತನ ಪಾವತಿಯಾಗುತ್ತಿಲ್ಲ. ತಿಂಗಳ ಕೊನೆಯಾದರೂ ಸಂಬಳ ಸಿಗದೇಕಾರ್ಮಿಕರು ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಕನಿಷ್ಠ ವೇತನ ನಂಬಿ ಬದುಕುವ ಕುಟುಂಬಗಳ ಮಾನಸಿಕ ಸ್ಥಿತಿಯನ್ನು ಸರ್ಕಾರ ಅರ್ಥಮಾಡಿಕೊಳ್ಳಬೇಕು ಮತ್ತು ಪ್ರತಿ ತಿಂಗಳು ತಪ್ಪದೇ ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ವೇತನ ಜಮಾ ಮಾಡಬೇಕು. ಸರ್ಕಾರ ನೀಡುವ ಗ್ಲೌಸ್, ಶೂ ಹಾಗೂ ಉಡುಪು (ಯೂನಿಫಾರ್ಮ್) ಸೇರಿದಂತೆ ಎಲ್ಲಾ ಸುರಕ್ಷತಾ ಪರಿಕರಗಳನ್ನು ಪೌರಕಾರ್ಮಿಕರು ಕಡ್ಡಾಯವಾಗಿ ಬಳಸಬೇಕು. ತಮ್ಮ ಆರೋಗ್ಯ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಕಾರ್ಮಿಕರು ಈ ವಿಷಯದಲ್ಲಿ ಬೇಜವಾಬ್ದಾರಿತನ ತೋರಬಾರದು. ಪೌರಕಾರ್ಮಿಕರು ಮಕ್ಕಳು ಕೇವಲ ಇದೇ ವೃತ್ತಿಗೆ ಸೀಮಿತವಾಗದೆ, ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿ ಉನ್ನತ ಶಿಕ್ಷಣ ಪಡೆದು ಕೆ.ಎ.ಎಸ್, ತಹಶೀಲ್ದಾರ್, ಪಿ.ಎಸ್.ಐ ನಂತಹ ಉನ್ನತ ಹುದ್ದೆಗಳನ್ನು ಅಲಂಕರಿಸುವ ಕನಸು ಕಾಣಬೇಕು. ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ರಾಮಕೃಷ್ಣ ಆಶ್ರಮದಂತಹ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಸಿಗುವ ಶೈಕ್ಷಣಿಕ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಗದಗ-ಬೆಟಗೇರಿ ನಗರಸಭೆಯ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿ ಮತ್ತು ಒಕಾರುಗಳನ್ನು ಬಿಡಿಸಿಕೊಡುವಲ್ಲಿ ಪೌರಕಾರ್ಮಿಕರ ಹೋರಾಟ ಮತ್ತು ಕೊಡುಗೆ ಅಪಾರವಾಗಿದೆ ಎಂಬುದನ್ನು ಇಲಾಖೆ ನೆನಪಿನಲ್ಲಿಟ್ಟುಕೊಂಡು ಕಾರ್ಮಿಕರನ್ನು ಗೌರವಯುತವಾಗಿ ನಡೆಸಿಕೊಳ್ಳಬೇಕು ಎಂದರು. ಸಫಾಯಿ ಕರ್ಮಚಾರಿ ಸಂಘದ ನಾಮನಿರ್ದೇಶಿತ ಸದಸ್ಯ ಮುತ್ತು ಬಿಳೆಯಲಿ ಮಾತನಾಡಿ ಪ್ರತಿದಿನ ಬೆಳಗ್ಗೆ 5 ಗಂಟೆಗೆ ಪೌರಾಕಾರ್ಮಿಕರು ಎದ್ದು ತಮ್ಮ ಎಲ್ಲ ಕಷ್ಟ-ನೋವುಗಳನ್ನು ಮರೆತು ಇಡೀ ನಗರವನ್ನು ಸ್ವಚ್ಛಗೊಳಿಸುವ ಪೌರಕಾರ್ಮಿಕರು ಕೇವಲ ನೌಕರರಲ್ಲ, ಅವರು ಸಮಾಜದ ನಿಜವಾದ ಆರೋಗ್ಯ ರಕ್ಷಕರು" ಎಂದು ಅಭಿಪ್ರಾಯಪಟ್ಟರು. 1974ರಲ್ಲಿ ಇಡೀ ದೇಶದಲ್ಲೇ ಪ್ರಪ್ರಥಮ ಬಾರಿಗೆ ಮಲಹೊರುವ ಪದ್ಧತಿಯನ್ನು ನಿಷೇಧಿಸಿದ ಕೀರ್ತಿ ಕರ್ನಾಟಕ ಸರ್ಕಾರಕ್ಕೆ ಸಲ್ಲುತ್ತದೆ. ಬಿ. ಬಸವಲಿಂಗಪ್ಪ ಹಾಗೂ ಐ.ಪಿ.ಡಿ. ಸಾಲಪ್ಪನವರ ಕೊಡುಗೆಯನ್ನು ಪೌರಕಾರ್ಮಿಕರು ಎಂದಿಗೂ ಮರೆಯುವಂತಿಲ್ಲ. ಐ.ಪಿ.ಡಿ. ಸಾಲಪ್ಪನವರ ವರದಿ ಸಲ್ಲಿಕೆಯಾಗಿ 35 ವರ್ಷಗಳಾಗಿದ್ದರೂ, ಇಲಾಖೆಗಳು ಅದನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರದಿರುವುದು ವಿಷಾದನೀಯ ಎಂದರು. ಪೌರಕಾರ್ಮಿಕರು ತಮಗೆ ಇಲಾಖೆಯಿಂದ ನೀಡಲಾಗುವ ಗ್ಲೌಸ್, ಶೂ ಸೇರಿದಂತೆ ಎಲ್ಲಾ ಸುರಕ್ಷತಾ ಪರಿಕರಗಳನ್ನು ಕಡ್ಡಾಯವಾಗಿ ಧರಿಸಿ ಕೆಲಸ ಮಾಡಬೇಕು. ಇದು ನಿಮ್ಮ ಆರೋಗ್ಯ ಮತ್ತು ಕಾನೂನಾತ್ಮಕ ಹಕ್ಕುಗಳ ರಕ್ಷಣೆಗೆ ಅತ್ಯಗತ್ಯವಾಗಿದೆ ಎಂದು ಸಮಿತಿಯ ಸದಸ್ಯರು ಮನವಿ ಮಾಡಿದರು. ಗದಗ ಬೆಟಗೇರಿ ನಗರಸಭೆ ಂಇಇ ( ಪರಿಸರ ) ಆನಂದ ಬದಿ ಅವರು ಸರ್ವರನ್ನು ಸ್ವಾಗತಿಸಿ ವಂದನಾರ್ಪಣೆ ಸಲ್ಲಿಸಿ ಕಾರ್ಯಕ್ರಮವನ್ನು ನಿರೂಪಿಸಿದರು. ಈ ಕಾರ್ಯಕ್ರಮದಲ್ಲಿ ಉಪ ವಿಭಾಗಾಧಿಕಾರಿ ಗಂಗಪ್ಪ ಎಂ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸವನಗೌಡ ಕೊಟೂರು, ಕಾನೂನು ಸಲಹೆಗಾರ ಎಸ್.ಜಿ ಪಲ್ಲೆದ, ಪೌರಕಾರ್ಮಿಕರ ಸಂಘದ ಅಧ್ಯಕ್ಷ ಹೆಚ್.ಎಂ. ಶೆಟ್ಟಿ, ಸಂಚಾಲಕ ರಮೇಶ ಕೊಳೂರು, ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು, ಪೌರಕಾರ್ಮಿಕರು, ಸ್ವಚ್ಛತಾ ಕೆಲಸಗಾರರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ಗದಗ: 2026-27 ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1 ರ ಅಲೆಮಾರಿ/ ಅರೆಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಂದ, ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ , ಅಲೆಮಾರಿ/ಅರೆಅಲೆಮಾರಿ ಜನಾಂಗದ ಮೆಟ್ರಿಕ್ ನಂತರದ ಅರ್ಹತಾ ವಿದ್ಯಾರ್ಥಿವೇತನ, ಶುಲ್ಕ ವಿನಾಯಿತಿ, ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 31 ಕೊನೆಯ ದಿನವಾಗಿದೆ. https://ssp.postmatric.karnataka.gov.in ವೆಬ್‌ಸೈಟ್ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಗದಗ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಚೇರಿಯನ್ನು ಸಂಪರ್ಕಿಸಬೇಕೆಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಮಹೆಬೂಬ ತುಂಬರಮಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಜನಶ್ರೀ ಟೈಮ್ಸ್**
**ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.**

# ಮಳೆರಾಯನ ಕೃಪೆಗಾಗಿ ರೈತರಿಂದ ವಿಶೇಷ ಪೂಜೆ, ಭಜನೆ



ಲಕ್ಷ್ಮೇಶ್ವರ: ಸಮೃದ್ಧ ಮಳೆ-ಬೆಳೆಗಾಗಿ ಲಕ್ಷ್ಮೇಶ್ವರದ ರೈತ ಸಮುದಾಯದಿಂದ ಮಂಗಳವಾರ ಮಂಜಲಾಪುರದ ಕೊಲ್ಲಾರೆಮ್ಮ ದೇವಿಗೆ ಸಾಂಪ್ರದಾಯಿಕವಾಗಿ ಹೊಂಡಕ್ಕೆ ನೀರು ತುಂಬಿಸಿ ವರುಣ ದೇವನಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಪಟ್ಟಣದ ಸೊಪ್ಪಿನಕೇರಿ ಓಣಿಯ ರೈತರು ಜಂತ್ಲಿ ಬಸವೇಶ್ವರ ದೇವಸ್ಥಾನದಿಂದ ಭಜನೆ ಹಾಡುತ್ತಾ ಕೊಲ್ಲಾರೆಮ್ಮ ದೇವಿಯ ಸನ್ನಿಧಿಗೆ ತೆರಳಿ ಸಂಪ್ರದಾಯಬದ್ಧ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು. ದೇವಿಯ ಪ್ರಾಂಗಣದ ಮುಂಭಾಗದಲ್ಲಿ ಸಣ್ಣ ಹೊಂಡ ನಿರ್ಮಿಸಿ ಅದರಲ್ಲಿ ನೀರು ತುಂಬಿಸಿ, ವರುಣ ದೇವರ ಮೂರ್ತಿಯನ್ನು ತಯಾರಿಸಿ ಪೂಜೆ ಸಲ್ಲಿಸಲಾಯಿತು. ಅಲ್ಲದೆ, ಅಶ್ವತ್ಥ ಕಟ್ಟೆಗೂ ವಿಶೇಷ ಪೂಜೆ ನೆರವೇರಿಸಲಾಯಿತು. ಮಳೆ ಸಮೃದ್ಧಿಯಾಗಿ ಸುರಿದು ಕೃಷಿ ಚಟುವಟಿಕೆಗಳು ಯಶಸ್ವಿಯಾಗಲಿ, ರೈತರ ಬದುಕು ಹಸನಾಗಲಿ ಎಂಬ ಆಶಯದೊಂದಿಗೆ ರೈತರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಈ ವೇಳೆ ಪೂಜಾರಿಯ ಮೂಲಕ ಕೊಲ್ಲಾರೆಮ್ಮನ ಮಳೆಯ ಆಗಮನದ ವಾಣಿಯಾಗುತ್ತದೆ. ವಾಣಿಯಂತೆ 3 ದಿನಗಳಲ್ಲಿ ಮಳೆಯಾಗುತ್ತದೆ. ಭೂಮಿ ತಾಯಿಯ ಮಕ್ಕಳಾದ ರೈತರು ಸಂಪ್ರದಾಯ, ದೇವರು ಧರ್ಮದ ಮೊರೆ ಹೋಗುವುದನ್ನು ಮರೆಯಬಾರದು ಎನ್ನಲಾಯಿತು.

ಹಿರಿಯರ ಕಾಲದಿಂದಲೂ ಮಳೆರಾಯನ ಕೃಪೆಗಾಗಿ ಕೊಲ್ಲಾರೆಮ್ಮ ದೇವಿಗೆ ವಿಶೇಷ ಪೂಜೆ ಸಲ್ಲಿಸುವ ಈ ವೇಳೆ 5 ಮಂಗಳವಾರ ವೃತಾಚರಣೆ ಸಂಪ್ರದಾಯ ಮಾಡುತ್ತಾ ಬರಲಾಗಿದೆ. ದೇವಿಯ ವಾಣಿಯಂತೆ ಮಳೆಯಾದ ನಂತರದಲ್ಲಿ ರೈತ ಸಮುದಾಯವೆಲ್ಲ ಸೇರಿ ಗೋಧಿ ಹುಗ್ಗಿ, ಜೋಳದ ಕಿಚಡಿ, ಅನ್ನ ಪ್ರಸಾದ ಸಿದ್ದಪಡಿಸಿ ಬಂಡಿಯಲ್ಲಿ ಹೇರಿಕೊಂಡು ಹಬ್ಬದ ಸಂಭ್ರಮದಂತೆ ಆಗಮಿಸಿ ಪೂಜೆ, ಪರವು ಮಾಡಲಾಗುತ್ತದೆ. ದೇವಿಯ ವಾಣಿ ಎಂದಿಗೂ ಸುಳ್ಳಾಗಿಲ್ಲ ರೈತರು ಶ್ರದ್ಧಾ ಭಕ್ತಿಯಿಂದ ಮುಂದುವರಿಸಿಕೊಂಡು ಬರುತ್ತಿದ್ದಾರೆ ಎಂದು ಹಿರಿಯರಾದ ಭರಮಪ್ಪ ಗುಡಗೇರಿ, ನೀಲಪ್ಪ ಕನವಳ್ಳಿ ಹೇಳಿದರು.

ಈ ಸಂದರ್ಭದಲ್ಲಿ ನೀಲಪ್ಪ ಕನವಳ್ಳಿ, ಭರಮಪ್ಪ ಕೊಡ್ಲಿ, ಚನ್ನಪ್ಪ ಆದಿ, ಭರಮಣ್ಣ ಗುಡಗೇರಿ, ಮುದಕನಗೌಡ ಪಾಟೀಲ, ಈರಣ್ಣ ಮುಳಗುಂದ, ಸೋಮಣ್ಣ ಚಿಂಚಲಿ, ವಿರೂಪಾಕ್ಷ ಆದಿ, ಮಯೂರಗೌಡ ಪಾಟೀಲ, ಮಂಜಪ್ಪ ಮುಳಗುಂದ, ಈರಪ್ಪ ಗುಡಗೇರಿ, ರಮೇಶ್ ಹೆಬ್ಬಾಳ, ಬಸವರಾಜ ಆದಿ, ಸಿದ್ದು ರಾಚನಾಯ್ಕರ, ಶೇಖಪ್ಪ ಪುಟಾಣಿ, ಈರಣ್ಣ ಹುಳಕನವರ, ಶಂಭು ತಂಡಿಗೇರ, ಪರಶುರಾಮ ಶಿರಹಟ್ಟಿ ಸೇರಿದಂತೆ ರೈತರು ಹಾಗೂ ಮಹಿಳೆಯರು ಪಾಲ್ಗೊಂಡಿದ್ದರು.

# ವಿದ್ಯುತ್ ಕ್ಷೇತ್ರ ಖಾಸಗೀಕರಣಕ್ಕೆ ವಿರೋಧ : ರೈತರು, ಬಳಕೆದಾರರ ಹಿತಕ್ಕೆ ಮಾರಕ ರಾಜೇಶ ಕಲ್ಯಾಣಶೆಟ್ಟಿ



ಲಕ್ಷ್ಮೇಶ್ವರ: ರಾಜ್ಯದಲ್ಲಿ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸುವ ಯಾವುದೇ ಕ್ರಮವು ರೈತರು, ವಿದ್ಯುತ್ ಬಳಕೆದಾರರು ಹಾಗೂ ವಿದ್ಯುತ್ ವಲಯದ ನೌಕರರ ಭವಿಷ್ಯಕ್ಕೆ ಮಾರಕವಾಗಿದೆ. ದೀರ್ಘ ಇತಿಹಾಸ ಹೊಂದಿರುವ ಸಾರ್ವಜನಿಕ ಸಂಸ್ಥೆಯನ್ನು ಖಾಸಗಿ ವಲಯಕ್ಕೆ ಒಪ್ಪಿಸುವ ಕ್ರಮ ಖಂಡನೀಯ ಎಂದು ಗದಗ ಪಾಲನಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ರಾಜೇಶ ಕಲ್ಯಾಣಶೆಟ್ಟಿ ಹೇಳಿದರು.

ಅವರು ಪಟ್ಟಣದ ಹೆಸ್ಕಾಂ ಉಪವಿಭಾಗ ಕಚೇರಿ ಆವರಣದಲ್ಲಿ ಆಯೋಜಿಸಿದ್ದ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ವತಿಯಿಂದ ಟಾಟಾ ಪವರ್ ಕಂಪನಿಗೆ ವಿದ್ಯುತ್ ವಿತರಣಾ ಪರವಾನಗಿ ನೀಡದಂತೆ ಹಾಗೂ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸದಂತೆ ರೈತರು, ಬಳಕೆದಾರರು ಮತ್ತು ಹೆಸ್ಕಾಂ ನೌಕರರಿಗಾಗಿ ಹಮ್ಮಿಕೊಂಡಿದ್ದ ಆಕ್ಷೇಪಣಾ ಅರ್ಜಿ ಸಲ್ಲಿಸುವುದು ಹಾಗೂ ಜನಜಾಗೃತಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಹೆಸ್ಕಾಂ ಸಂಸ್ಥೆಯು ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿರುವ ವಿದ್ಯುತ್ ಕಂಬಗಳು, ಉಪಕೇಂದ್ರಗಳು ಸೇರಿದಂತೆ ಮೂಲಸೌಕರ್ಯಗಳನ್ನು ಖಾಸಗಿ ಕಂಪನಿಗಳಿಗೆ ಬಳಸಲು ಅವಕಾಶ ನೀಡಿದರೆ ಅದು ಸರ್ಕಾರಿ ಆಸ್ತಿಯನ್ನು ಖಾಸಗಿ ಸಂಸ್ಥೆಗಳಿಗೆ ಒಪ್ಪಿಸಿದಂತಾಗುತ್ತದೆ ಖಾಸಗೀಕರಣದಿಂದ ರೈತರಿಗೆ ನೀಡುತ್ತಿರುವ ಉಚಿತ ವಿದ್ಯುತ್ ಸೌಲಭ್ಯ ರದ್ದಾಗುವ ಸಾಧ್ಯತೆ ಇದ್ದು, ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆ ಕಡ್ಡಾಯವಾಗಬಹುದು. ಸರ್ಕಾರದ ಗೃಹಜ್ಯೋತಿ, ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಹಾಗೂ ಗಂಗಾ ಕಲ್ಯಾಣ ಸೇರಿದಂತೆ ಹಲವು ಜನಪರ ಯೋಜನೆಗಳು ಸ್ಥಗಿತಗೊಳ್ಳುವ ಅಪಾಯವಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಇದಲ್ಲದೆ ಕೈಮಗ್ಗ ನೇಕಾರರು ಹಾಗೂ ಕಾಫಿ ಬೆಳೆಗಾರರಿಗೆ ನೀಡಲಾಗುತ್ತಿರುವ ಸಬ್ಸಿಡಿ ಸೌಲಭ್ಯಗಳು ರದ್ದಾಗುವ ಸಾಧ್ಯತೆ ಇದೆ. ವಿದ್ಯುತ್ ಬಳಕೆಗೆ ಮುಂಗಡ ಹಣ ಪಾವತಿ ವ್ಯವಸ್ಥೆ ಜಾರಿಯಾಗುವ ಅಪಾಯವಿದೆ. ಸರ್ಕಾರಿ ಉದ್ಯೋಗಾವಕಾಶಗಳು ಕಡಿಮೆಯಾಗುವ ಮೂಲಕ ಯುವಜನತೆಗೆ ಅನ್ಯಾಯವಾಗಲಿದೆ. ಗ್ರಾಮೀಣ ಗ್ರಾಹಕರು ಹಾಗೂ ರೈತರು ಸಂಕಷ್ಟಕ್ಕೆ ಸಿಲುಕಲಿದ್ದು, ವಿದ್ಯುತ್ ವಲಯದ ಕಾರ್ಮಿಕರ ಭವಿಷ್ಯವೂ ಅತಂತ್ರವಾಗಲಿದೆ ಎಂದು ಹೇಳಿದರು.

ಅಖಿಲ ಕರ್ನಾಟಕ ರಾಜ್ಯ ಕಿಸಾನ್ ಜಾಗೃತಿ ಸಂಘದ ಜಿಲ್ಲಾ ಗೌರವಾಧ್ಯಕ್ಷ ಟಾಕಪ್ಪ ಸಾತಪುತೆ, ಈಗಾಗಲೇ ಕೆಲವು ರಾಜ್ಯಗಳಲ್ಲಿ ಖಾಸಗಿ ಕಂಪನಿಗಳು ವಿದ್ಯುತ್ ಕ್ಷೇತ್ರಕ್ಕೆ ಪ್ರವೇಶಿಸಿದ ಪರಿಣಾಮ ರೈತರು ಹಾಗೂ ಬಳಕೆದಾರರು ಸಂಕಷ್ಟ ಅನುಭವಿಸುತ್ತಿದ್ದಾರೆ. ಆದ್ದರಿಂದ ಜೂನ್ 23ರೊಳಗೆ ಆಕ್ಷೇಪಣಾ ಪತ್ರ ಅಭಿಯಾನವನ್ನು ಯಶಸ್ವಿಗೊಳಿಸಿ ಜನಪರ ಹೋರಾಟ ನಡೆಸಬೇಕಾಗಿದೆ ಎಂದು ಕರೆ ನೀಡಿದರು.

ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಸುರೇಶ ಸ್ವಾದಿ, ಅಂಜುಮನ್-ಎ-ಇಸ್ಲಾಂ ಸಂಸ್ಥೆಯ ಅಧ್ಯಕ್ಷ ಮುಕ್ತಾರ ಅಹ್ಮದ್ ಗದಗ, ಬಾಬಣ್ಣ ಉಮಚಗಿ, ಬಸವರಾಜ ಸೂರಣಗಿ ಹಾಗೂ ಬಸವರಾಜ ಟೋಕಾಳಿ ಮಾತನಾಡಿ, ಯಾವುದೇ ಕಾರಣಕ್ಕೂ ಟಾಟಾ ಪವರ್ ಕಂಪನಿಗೆ ವಿದ್ಯುತ್ ಕ್ಷೇತ್ರದ ವಿತರಣಾ ಪರವಾನಗಿ ನೀಡಬಾರದು. ಖಾಸಗೀಕರಣದ ವಿರುದ್ಧ ತೀವ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಹೆಸ್ಕಾಂ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (JEE) ಅಂಜನೇಪ್ಪ ಬಿ., ಶಾಖಾಧಿಕಾರಿಗಳಾದ ಕಿರಣಕುಮಾರ ಪಮ್ಮಾರ, ರಘುಪತಿ ನಾಯಕ, ಇರನಗೌಡ, ಬಸವರಾಜ, ವಿಜಯ, ಸಂತೋಷ ನಾಯಕ, ಅಂಬರೀಷ ಹುಲಗೂರ, ಅಮರೇಶ್ವರ ಚಾ. ಹುಲಗೂರ, ಮಹಾಂತೇಶ ಇಟಗಿ, ಮುಖಂಡರಾದ ಚಂಬಣ್ಣ ಬಾಳಿಕಾಯಿ, ಸುಲೇಮಾನಸಾಬ ಕಣಕೆ, ಸಿ.ಆರ್. ಲಕ್ಕುಂಡಿಮಠ, ಪಂಚಯ್ಯ ಸಾಲಿಮಠ, ಮಂಜುನಾಥ ಹೊಗೆಸೊಪ್ಪಿನ, ಹನುಮಂತಪ್ಪ ಬಾರ್ಕಿ, ಯಲ್ಲಪ್ಪ ತಳವಾರ, ಹನುಮಂತಗೌಡ ಪಾಟೀಲ್, ಬಸಪ್ಪ ಧರ್ಮಂತರ, ಮಹಮ್ಮದಸಾಬ್ ಸಿದ್ದಿ, ಲಕ್ಷ್ಮಣ ಕಾರಬಾರಿ, ಚಂದ್ರಕಾಂತ ಕಾರಬಾರಿ, ಪ್ರಭಾಕರ ಜಾದವ, ನಾಗನಗೌಡ ಪಾಟೀಲ್ ಸೇರಿದಂತೆ ಅನೇಕ ರೈತರು, ಲೈನ್‌ಮನ್‌ಗಳು ಹಾಗೂ ವಿದ್ಯುತ್ ಬಳಕೆದಾರರು ಭಾಗವಹಿಸಿದ್ದರು.

# ಭಾರತದ ಅಭಿವೃದ್ಧಿ ವಿಶ್ವ ಶಾಂತಿ ಸಮೃದ್ಧಿಯ ಸಂಕೇತ : ಮೋಹನ್ ಭಾಗವತ್



ನವದೆಹಲಿ: ಭಾರತವು ವಿಶ್ವಗುರುವಾಗಿ ಹೊರಹೊಮುವಾಗ ತನ್ನ ನಾಗರಿಕತೆಯ ಮೌಲ್ಯಗಳನ್ನು ಆಧಾರವಾಗಿಟ್ಟುಕೊಂಡು ವಿಶ್ವಕ್ಕೆ ಶಾಂತಿ ಮತ್ತು ಸಮೃದ್ಧಿಯನ್ನು ನೀಡುವ ದಿಕ್ಕಿನಲ್ಲಿ ಸಾಗಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ದೆಹಲಿ ನಗರದಲ್ಲಿ ಹೀರೋ ಎಂಟರ್‌ಪ್ರೈಸ್ ಆಯೋಜಿಸಿದ್ದ 18ನೇ ಬಿಎಂಎಲ್ ಮುಂಜಾಲ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಭಾಷಣ ಮಾಡಿದ ಅವರು, ಶ್ರಮದ ಘನತೆ, ಸಂಪತ್ತಿನ ಸಮಾನ ಹಂಚಿಕೆ, ನೈತಿಕ ಸಂಪತ್ತಿನ ಸೃಷ್ಟಿ ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ಯುವಜನರ ಪಾತ್ರದ ಮಹತ್ವವನ್ನು ಒತ್ತಿಹೇಳಿದರು. ಭಾರತವು ಕೇವಲ ಭೌಗೋಳಿಕ ಪ್ರದೇಶದ ಹೆಸರಲ್ಲ. ಇದು ಸಾವಿರಾರು ವರ್ಷಗಳ ನಾಗರಿಕತೆಯ ಅಸ್ತಿತ್ವವಾಗಿದೆ. ಅನೇಕ ಆಕ್ರಮಣಗಳು, ವಿದೇಶಿ ಆಳ್ವಿಕೆ ಹಾಗೂ ಐತಿಹಾಸಿಕ ಸವಾಲುಗಳನ್ನು ಎದುರಿಸಿ ಉಳಿದುಕೊಂಡಿರುವ ಶಾಶ್ವತ ಸಂಸ್ಕೃತಿ ಭಾರತದ್ದಾಗಿದೆ ಎಂದು ಅವರು ಹೇಳಿದರು.

ಗಂಗಾನದಿಯನ್ನು ಉದಾಹರಿಸಿ ಮಾತನಾಡಿದ ಭಾಗವತ್ ಗಂಗೆ ಸಾವಿರಾರು ವರ್ಷಗಳಿಂದ ಹರಿಯುತ್ತಿದೆ. ಅದು ಪುರಾತನವಾದರೂ ಅದರ ನೀರು ಸದಾ ಹೊಸದಾಗಿರುತ್ತದೆ. ಭಾರತವೂ ಶಾಶ್ವತ ಮತ್ತು ಸದಾ ನವೀಕೃತವಾಗಿರುವ ನಾಗರಿಕತೆ ಎಂದರು.ಭಾರತದ ಬೆಳವಣಿಗೆಯಿಂದ ಕೇವಲ ದೇಶಕ್ಕಷ್ಟೇ ಅಲ್ಲ, ಇಡೀ ವಿಶ್ವಕ್ಕೂ ಪ್ರಯೋಜನವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು. ಭಾರತ ಉದಯಿಸಿದಾಗ ಕೇವಲ ಭಾರತಕ್ಕೆ ಮಾತ್ರ ಲಾಭವಾಗುವುದಿಲ್ಲ. ವಿಶ್ವದಾದ್ಯಂತ ಶಾಂತಿ ಮತ್ತು ಸಂತೋಷ ಹರಡುತ್ತದೆ. ವ್ಯಕ್ತಿಯ ಕಲ್ಯಾಣ, ರಾಷ್ಟ್ರದ ಅಭಿವೃದ್ಧಿ ಮತ್ತು ಮುಂದಿನ ಪೀಳಿಗೆಯ ಹಿತ ಈ ಮೂರೂ ಗುರಿಗಳು ಒಂದೇ ಪ್ರಯತ್ನದಲ್ಲಿ ಸಾಧನೆಯಾಗುತ್ತವೆ, ಎಂದು ಹೇಳಿದರು.

ಮುಂದಿನ 20ರಿಂದ 30 ವರ್ಷಗಳಲ್ಲಿ ಭಾರತವು ವಿಶ್ವದ ಅಗ್ರ ರಾಷ್ಟ್ರವಾಗಿ ಹೊರಹೊಮಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಅವರು, ಭಾರತ ವಿಶ್ವಗುರುವಾಗಲಿದೆ. ಅದು ಶಕ್ತಿಶಾಲಿಯಾಗಲಿದೆ. ಆದರೆ ಆ ಶಕ್ತಿಯನ್ನು ವಿಶ್ವದ ಕಲ್ಯಾಣಕ್ಕಾಗಿ ಬಳಸಲಿದೆ. ಮಾನವಕುಲಕ್ಕೆ ಮಾರ್ಗದರ್ಶಕವಾಗಲಿದೆ. ಇದೇ ನಮ್ಮ ದೃಷ್ಟಿಕೋನ, ಎಂದರು. ದೇಶದ ಯುವಜನರಲ್ಲಿ ಸೇವಾ ಮನೋಭಾವ, ದೇಶಭಕ್ತಿ ಮತ್ತು ಉತ್ತಮ ವ್ಯಕ್ತಿತ್ವದ ಮೌಲ್ಯಗಳನ್ನು ಬೆಳೆಸಬೇಕಾದ ಅಗತ್ಯವಿದೆ ಎಂದು ಅವರು ಹೇಳಿದರು. ನಾವು ಯುವಜನರನ್ನು ಕಠಿಣ ಪರಿಶ್ರಮ ಮತ್ತು ಸೇವೆಯ ಮನೋಭಾವದಿಂದ ಪ್ರೇರೇಪಿಸಬೇಕು. ಭಾರತದ ಬಲವರ್ಧನೆಗಾಗಿ ಅವರಲ್ಲಿ ಆಶಯವನ್ನು ಜಾಗೃತಗೊಳಿಸಬೇಕು. ನಮ್ಮ ಬದುಕಿನ ಮೂಲಕವೇ ಅವರಿಗೆ ದಾರಿದೀಪವಾಗಬೇಕು, ಎಂದು ಹೇಳಿದರು.

ಪರಿಸರ ಹಾನಿ ಮತ್ತು ಅತಿಯಾದ ಉಪಭೋಗದಂತಹ ಜಾಗತಿಕ ಸಮಸ್ಯೆಗಳಿಗೆ ಭಾರತದಲ್ಲಿ ಪರಿಹಾರದ ವಿಚಾರಗಳಿವೆ ಎಂದು ಭಾಗವತ್ ಅಭಿಪ್ರಾಯಪಟ್ಟರು.ಭೂಮಿಯು ಮಾನವಕುಲವನ್ನು ಉಳಿಸಬಲ್ಲದು. ಆದರೆ ದುರಾಸೆ ಅಸಮತೋಲನವನ್ನು ಉಂಟುಮಾಡುತ್ತದೆ.ಅಮೆರಿಕದ ಜೀವನಮಟ್ಟವನ್ನು ಅತ್ಯುತ್ತಮವೆಂದು ಪರಿಗಣಿಸಲಾಗುತ್ತದೆ. ಆದರೆ 142 ಕೋಟಿ ಭಾರತೀಯರು ಅದೇ ಮಟ್ಟದಲ್ಲಿ ಸಂಪನ್ಮೂಲಗಳನ್ನು ಬಳಸಿದರೆ ಒಂದು ಭೂಮಿ ಸಾಕಾಗುವುದಿಲ್ಲ; ಆರು ಭೂಮಿಗಳು ಬೇಕಾಗುತ್ತವೆ, ಎಂದು ಅವರು ಎಚ್ಚರಿಸಿದರು. ಇತರ ರಾಷ್ಟ್ರಗಳನ್ನು ಕುರುಡಾಗಿ ಅನುಕರಿಸಬಾರದು ಎಂದು ಹೇಳಿದ ಅವರು, ಭಾರತವು ಮಹಾಶಕ್ತಿಯಾಗಿ ಬೆಳೆದ ಬಳಿಕ ಅಮೆರಿಕ ಅಥವಾ ಇತರ ಬಲಿಷ್ಠ ರಾಷ್ಟ್ರಗಳಂತೆ ವರ್ತಿಸಿದರೆ ಅದು ಭಾರತವಾಗಿರುವುದಿಲ್ಲ. ಭಾರತ ಶಕ್ತಿಯುತವಾದಾಗ ವಿಶ್ವದಲ್ಲಿ ಶಾಂತಿ ಮತ್ತು ಸೌಹಾರ್ದ ಹೆಚ್ಚಾಗಬೇಕು, ಎಂದರು.

ಭಾರತ ಮತ್ತು ಅಮೆರಿಕದ ಸಂಬಂಧದ ಬಗ್ಗೆ ನಡೆದ ಸಂಭಾಷಣೆಯನ್ನು ಉಲ್ಲೇಖಿಸಿದ ಅವರು, ಒಬ್ಬ ವಿದೇಶಿ ವ್ಯಕ್ತಿ ಭಾರತ ಮತ್ತು ಅಮೆರಿಕ ಸಹಜ ಮಿತ್ರರಾಗಬಹುದು ಎಂದರು. ಆರ್ಥಿಕ ಹಾಗೂ ರಕ್ಷಣಾ ಸಹಕಾರವೂ ಸಾಧ್ಯ ಎಂದರು. ಆದರೆ ಪ್ರತೀ ಬಾರಿ ಅವರು ಅಮೆರಿಕದ ಹಿತಾಸಕ್ತಿಗಳನ್ನು ಕಾಪಾಡುವ ಷರತ್ತು ವಿಧಿಸುತ್ತಿದ್ದರು ಎಂದು ಹೇಳಿದರು.

ನೆರೆಯ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧವು ಸ್ವಾರ್ಥದ ಮೇಲೆ ಅಲ್ಲ, ಕರ್ತವ್ಯ ಮತ್ತು ಮಾನವೀಯತೆಯ ಮೇಲೆ ಆದರಿತವಾಗಿದೆ ಎಂದು ಅವರು ತಿಳಿಸಿದರು. ಮಾಲ್ಡೀವ್?ಸನಲ್ಲಿ ಕುಡಿಯುವ ನೀರಿನ ಬಿಕ್ಕಟ್ಟು ಎದುರಾದಾಗ ನೆರವಾದದ್ದು ಭಾರತವೇ ಹೊರತು ಚೀನಾ ಅಲ್ಲ. ಶ್ರೀಲಂಕಾ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದಾಗ ಸಹಾಯಕ್ಕೆ ಧಾವಿಸಿದ ದೇಶವೂ ಭಾರತವೇ, ಎಂದು ಹೇಳಿದರು.

ನಾವು ಇನ್ನೂ ದೊಡ್ಡ ಮಟ್ಟದ ನೆರವು ನೀಡುವಷ್ಟು ಶ್ರೀಮಂತರಾಗಿಲ್ಲ. ಆದರೂ ನೆರೆಯ ರಾಷ್ಟ್ರ ಸಂಕಷ್ಟದಲ್ಲಿದ್ದರೆ ಸಹಾಯ ಮಾಡುವುದನ್ನು ಲೆಕ್ಕಾಚಾರ ಮಾಡುವುದಿಲ್ಲ. ಅದು ನಮ್ಮ ಸ್ವಭಾವ, ನಮ್ಮ ಧರ್ಮ, ಎಂದು ಅವರು ಹೇಳಿದರು.ವಿಶ್ವ ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಭಾರತದ ನಾಗರಿಕತೆಯ ಜ್ಞಾನದಲ್ಲಿ ಪರಿಹಾರ ಅಡಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಕೆಲವು ಸಮಸ್ಯೆಗಳಿಗೆ ಬೇರೆ ದೇಶಗಳು ಪರಿಹಾರ ಕಂಡುಕೊಂಡಿವೆ. ಆದರೆ ಕೆಲವು ಅಪೂರ್ಣ ಕಾರ್ಯಗಳನ್ನು ಪೂರ್ಣಗೊಳಿಸುವ ಸಾಮರ್ಥ್ಯ ಭಾರತಕ್ಕಷ್ಟೇ ಇದೆ, ಎಂದು ಹೇಳಿದರು.

ಸಂಪತ್ತು ಮತ್ತು ಅವಕಾಶಗಳು ಕೆಲವರ ಕೈಯಲ್ಲಿ ಕೇಂದ್ರೀಕೃತವಾಗದೆ ಸಮಾನವಾಗಿ ಹಂಚಿಕೆಯಾಗಬೇಕು ಎಂದು ಕರೆ ನೀಡಿದ ಅವರು, ಶ್ರಮಕ್ಕೆ ಗೌರವ ನೀಡುವ ಸಂಸ್ಕೃತಿ ಬೆಳೆಸಬೇಕೆಂದು ಒತ್ತಾಯಿಸಿದರು.

ಕಠಿಣ ಪರಿಶ್ರಮಕ್ಕೆ ಗೌರವ ಸಿಗಬೇಕು. ಶ್ರಮಕ್ಕೆ ಘನತೆ ದೊರಕಬೇಕು. ಪ್ರಾಮಾಣಿಕ ದುಡಿಮೆಗೆ ಮಾನ್ಯತೆ ಇರಬೇಕು. ಮುಂದಿನ ಪೀಳಿಗೆಗೆ ದುಡಿಯುವುದು ಹೆಮ್ಮೆಯ ವಿಷಯ ಎಂಬುದನ್ನು ಕಲಿಸಬೇಕು. ಶ್ರಮಕ್ಕೆ ಗೌರವ ನೀಡದೇ 140 ಕೋಟಿ ಜನರ ರಾಷ್ಟ್ರ ಸಮೃದ್ಧಿಯಾಗಲು ಸಾಧ್ಯವಿಲ್ಲ, ಎಂದು ಹೇಳಿದರು. ನೈತಿಕವಾಗಿ ಸಂಪತ್ತು ಸೃಷ್ಟಿಸುವುದು ಹಾಗೂ ಆದಾಯವನ್ನು ಜವಾಬ್ದಾರಿಯಿಂದ ಬಳಸುವ ಅಗತ್ಯವನ್ನೂ ಅವರು ಒತ್ತಿಹೇಳಿದರು. ರಾಷ್ಟ್ರ ಪುನರ್‌ನಿರ್ಮಾಣದ ಕಾರ್ಯವನ್ನು ಯಾವುದೇ ಒಂದು ಸಂಘಟನೆ, ರಾಜಕೀಯ ಪಕ್ಷ ಅಥವಾ ವ್ಯಕ್ತಿ ಒಬ್ಬನೇ ಸಾಧಿಸಲು ಸಾಧ್ಯವಿಲ್ಲ. ಸಮೃದ್ಧ, ನೈತಿಕ ಹಾಗೂ ಪರಿಸರ ಸ್ನೇಹಿ ಭಾರತ ನಿರ್ಮಾಣಕ್ಕೆ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು, ಎಂದು ಭಾಗವತ್ ಕರೆ ನೀಡಿದರು.

"JANASHREE TIMES" Kannada daily morning Owner, Published by ANANDAYYA DANAYYA VIRAKTAMATH Address: 229/1, 3 RD CROSS VIVEKANAND NAGAR NEAR WATER TANK, GADAG, KARNATAKA - 582101. Printed at: SHIVANI PRINTERS Printers. Address: AT: HULKOTI T/D: GADAG OFFICE ADDERS: SHIVANI PRINTERS NEW COURT OPPSITE PLOT NO 28 RS NO 312/3B GARAG COMPLEX, GADAG, KARNATAKA - 582101. email: janashreetimes@gmail.com